
ಡಾ. ಅಂಬೇಮೂಲೆ

ಯಕ್ಷವಲ್ಲರಿ



ಸಂಪಾದಕ : ಮುಳಿಯ ಶಂಕರ ಭಟ್ಟ

ಡಾ. ಅಂಬೇಮೂಲೆ

ಯಕ್ಷವಲ್ಲರಿ

(ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯ ಸಂಪದ)

ಸಂಪಾದಕ

ಮುಳಿಯ ಶಂಕರ ಭಟ್

ಪ್ರಕಾಶಕರು

ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯ ಪ್ರಕಾಶನ ಸಮಿತಿ

ಸಂಪರ್ಕ ವಿಳಾಸ : ಕಾಸರಗೋಡು ಟ್ಯುಟೋರಿಯಲ್ ಕಾಲೇಜು
ಶ್ರೀ ಪಾಂಡುರಂಗ ದೇವಸ್ಥಾನ ರಸ್ತೆ
ಕಾಸರಗೋಡು - 671 121
Ph : 04994 - 225818 (R)

ಡಾ. ಅಂಬೇಮೂಲೆ "ಯಕ್ಷವಲ್ಲರಿ"

ಬಹುಶ್ರುತ ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಮಗ್ರ ಸಾಹಿತ್ಯ ಸಂಪದ

ಸಂಪಾದಕ	: ಮುಳಿಯ ಶಂಕರ ಭಟ್ಟ ಅಂಚೆ : ಅಳಿಕೆ, ಬಂಟ್ವಾಳ ತಾಲೂಕು - ದ. ಕ. Ph : 08255 - 237533
ಪ್ರಕಾಶಕರು	: ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯ ಪ್ರಕಾಶನ ಸಮಿತಿ
ಸಂಪರ್ಕ ವಿಳಾಸ	: ಕಾಸರಗೋಡು ಟ್ಯುಟೋರಿಯಲ್ ಕಾಲೇಜು ಶ್ರೀ ಪಾಂಡುರಂಗ ದೇವಸ್ಥಾನ ರಸ್ತೆ ಕಾಸರಗೋಡು - 671121 Ph : 04994 - 225818 (R)
ಕೃತಿ ಸ್ವಾಮ್ಯ	: (R)
ಮೊದಲ ಮುದ್ರಣ	: 2006
ಪುಟಗಳು	: 627 + VIII + XXIII
ಬೆಲೆ	: ರೂ. 350.00
ಮುಖಪುಟ, ವರ್ಣಪುಟ ವಿನ್ಯಾಸ	: ಗಂಗಾಧರ ಬೆಳ್ಳಾರೆ, ಪುತ್ತೂರು Ph : 08251 - 237591
ಒಳಪುಟ ವಿನ್ಯಾಸ, ಮುದ್ರಣ	: ಹನುಮಾನ್ ಆಫ್‌ಸೆಟ್ ಪ್ರಿಂಟರ್ಸ್, ವಿಟ್ಲ - 574 243 Ph : 08255 - 265205

ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಮ್

ಶ್ರೀಸಂಸ್ಥಾನ ಗೋಕರ್ಣ - ಶ್ರೀರಾಮಚಂದ್ರಾಪುರಮಠ

ಅಂಚೆ : ಹನಿಯ, ಹೊಸನಗರ ತಾ. ಶಿವಮೊಗ್ಗ ಜಿಲ್ಲೆ - 577 418
ದೂರವಾಣಿ : 08185 - 556048 / 50, ಫ್ಯಾಕ್ಸ್ : 08185 - 556050, ಮೊಬೈಲ್ 9448073636
E-mail-srimata@vsnl.com Website : www.shreebharathi.org



ಶ್ರೀಯುತರಾದ ಪ್ರಕಾಶಕರು
ಡಾ. ಅಂಬೇಮೂಲೆ ಗೋವಿಂದ ಭಟ್ಟರ
ಸಾಹಿತ್ಯ ಪ್ರಕಾಶನ ಸಮಿತಿ

ಅದಾಗಿ ಶ್ರೀ ಸವಾರಿಯು ಶ್ರೀ ತಾರಣ ಸಂವತ್ಸರದ ಆಷಾಢ ಶುದ್ಧ ಪೂರ್ಣಿಮೆಯಂದು ಈ ಮುಕ್ಕಾಮಿನಲ್ಲಿ ಹನ್ನೊಂದನೇ ಚಾತುರ್ಮಾಸ್ಯ ವ್ರತಸಂಕಲ್ಪವನ್ನು ಕೈಗೊಂಡು, ಶ್ರೀ ಸೀತಾರಾಮಚಂದ್ರ - ಚಂದ್ರಮೌಳೀಶ್ವರ ರಾಜರಾಜೇಶ್ವರೀ ದೇವತಾ ದಿವ್ಯ ಸನ್ನಿಧಿಯಲ್ಲಿ ಅನುದಿನವೂ ಸಮಸ್ತ ಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತ ಕ್ಷೇಮದಿಂದ ವಸತಿ ಮಾಡಿದೆ.

"ನಾನೃಷಿಃ ಕುರುತೇ ಕಾವ್ಯಂ" ಭಾರತೀಯವಾದ ಸಕಲ ವಿದ್ಯೆ ಕಲೆಗಳು ಭಗವನ್ಮೂಲದಿಂದ ಬಂದವುಗಳಾಗಿದ್ದು, ಈ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡ ಕ್ರಾಂತದರ್ಶಿಮಾತ್ರ ಈ ನಡೆಯನ್ನು ಅನುಸರಿಸಿ ಕಾವ್ಯ ರಚಿಸಬಲ್ಲ. ಅಂತರಂಗದ ಸತ್ಯ ಸಂವೇದನೆಗಳಿಗೆ ಭಾಷಾರೂಪ ನೀಡಿದರೆ ಅದು ಕಾವ್ಯವಾಗಬಹುದು. ಕಾವ್ಯವು ಸಹೃದಯರಿಗೆ ಭಾವತನ್ಮಯತೆ ನೀಡಿ ಜೀವನಕ್ಕೆ ದಿವ್ಯ ಸಂದೇಶವನ್ನು ಸಾರುವುದು. ಈ ಕಾವ್ಯ ಪ್ರಕಾರಗಳಲ್ಲಿ ಯಕ್ಷಗಾನವೂ ಒಂದಾಗಿದ್ದು ಪುರಾಣದ ಮೌಲ್ಯಗಳನ್ನು ಜನಮಾನಸದಲ್ಲಿ ಸ್ಥಿರೀಕರಿಸುವ ದಿವ್ಯ ಸಾಹಿತ್ಯವಾಗಿದೆ. ಮನಕ್ಕೆ ಮುದವನ್ನೂ ಆತ್ಮಕ್ಕೆ

ಸಂಸ್ಕಾರವನ್ನೂ ನೀಡುವ ಈ ಕಲೆಯ ಸಾಹಿತ್ಯ ರಚನೆ ಉಳಿದ ಸಾಹಿತ್ಯ ರಚನೆಯಷ್ಟು ಸುಲಭವಲ್ಲ.

ಈ ಸರಸ್ವತಿಯ ಉಪಾಸನೆ ತಪೋರೂಪವಾದುದು. ಕಷ್ಟಸಾಧ್ಯವಾದ ತಪಸ್ಸಿನ ಒರೆಗಲ್ಲಿಗೆ ತಮ್ಮ ಕಲಾಮಯ ಜೀವನವನ್ನೇ ಒಡ್ಡಿರುವ ಡಾ. ಅಂಬೇಮೂಲೆ ಗೋವಿಂದ ಭಟ್ಟರ ಕಲಾಸೇವೆ ಅನುಪಮ. ಬಹುಭಾಷಾವಿಶಾರದರಾಗಿ ತಮ್ಮ ಅನುಭವಗಳನ್ನು ಯಕ್ಷಕೃತಿಯ ಮೂಲಕ ಅಭಿವ್ಯಕ್ತಿಗೊಳಿಸಿದ ಇವರ ಸಮಗ್ರ ಕೃತಿಗಳು ಪ್ರಕಟವಾಗುತ್ತಿರುವ ಸಂಗತಿ ಶ್ರೀ ಸಂಸ್ಥಾನದವರಿಗೆ ಅತೀವ ಸಂತಸವನ್ನು ತಂದಿದೆ. ಕವಿಯು ಚಿರಾಯುವಾಗುವುದು ತನ್ನ ಮೌಲ್ಯಯುಕ್ತ ಕೃತಿಗಳಿಂದ. ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸೇವೆಗೈದ ಗೋವಿಂದ ಭಟ್ಟರ ಸಮಗ್ರ ಕೃತಿಯು ಜನ ಮಾನಸಕ್ಕೆ ದಿವ್ಯ ಸಂದೇಶಗಳನ್ನು ಸಾರಲೆಂದು ಶ್ರೀ ಸಂಸ್ಥಾನದವರು ಹಾರೈಸಿದ ಸಂಗ್ತಿ ಶ್ರುತಪಡಿಸಿದೆ.

ಶ್ರೀ ಸಂಸ್ಥಾನದವರ ಅಪ್ಪಣೆಯಂತೆ

ಮಿತಿ - ಶ್ರೀ ತಾರಣ ಸಂ || ನಿಜಶ್ರಾವಣ
ಬಹುಳ ದ್ವಿತೀಯಾ ಬುಧವಾರ
ಮೊಕ್ಕಾ - ಶ್ರೀ ರಾಮಚಂದ್ರಾಪುರ ಮಠ,
ಹೊಸನಗರ

(ಗಣಪತಿ ಹೆಗಡೆ)
ಶ್ಯಾನಭೋಗರು
ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ಶ್ರೀ ರಾಮಚಂದ್ರಾಪುರ ಮಠ
For
ಮಂಜುನಾಥ ಹೆಬ್ಬಾರ

ಶ್ರೀ ಎಡನೀರು ಸಂಸ್ಥಾನ



ಶ್ರೀ ಎಡನೀರು ಮಠಾಧಿಪ
ಶ್ರೀ ಮದೀಶ್ವರಾನಂದಭಾರತೀಕರಕಮಲಸಂಜಾತರಾದ
ಶ್ರೀ ಶ್ರೀ ಶ್ರೀ ಕೇಶವಾನಂದಭಾರತೀ
ಶ್ರೀ ಪಾದಂಗಳವರು

ನಮ್ಮ ಸಂಸ್ಥಾನದ ಮುಖ್ಯಾಭಿಮಾನಿಗಳಾದ ಮುಳಿಯ ಶ್ರೀ ಶಂಕರ ಭಟ್ಟರಿಗೆ ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು -

ಅದಾಗಿ ಕಲಾವಿದರೂ, ವೈದ್ಯರೂ, ಪ್ರಸಂಗ ಕರ್ತರೂ ಆಗಿರುವ ಶ್ರೀ ಸಂಸ್ಥಾನದ ಅಭಿಮಾನಿಗಳಾದ ಡಾ. ಅಂಬೆಮೂಲೆ ಗೋವಿಂದ ಭಟ್ಟರ ಯಕ್ಷಗಾನ ಪ್ರಸಂಗಗಳನ್ನು - ಇತರ ಸಾಹಿತ್ಯಕ ಬರಹಗಳನ್ನು ಒಂದೆಡೆ ಸಂಕಲಿಸಿ ಕೊಡುವ ತಮ್ಮ ಶುಭ ಪ್ರಯತ್ನವನ್ನು ತಿಳಿದು ನಮಗೆ ಅತೀವ ಆನಂದವಾಯಿತು. ಶ್ರೀ ಗೋವಿಂದ ಭಟ್ಟರು ಪ್ರವಚನಕಾರರಾಗಿ, ತಾಳಮದ್ದಳೆಯ ಅರ್ಥಧಾರಿಗಳಾಗಿ, ಪ್ರಸಂಗಕರ್ತರಾಗಿ, ಯಕ್ಷಗಾನ ನಟರಾಗಿ ಸಾಕಷ್ಟು ಹೆಸರು ಮಾಡಿದವರು. ವೃತ್ತಿಯಲ್ಲಿ ವೈದ್ಯರಾದರೂ ಕೃಷಿ ಮತ್ತು ಸಾಹಿತ್ಯ ಕೃಷಿ ಅವರ ನೆಚ್ಚಿನ ಪ್ರವೃತ್ತಿ. ಅವರ ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ದೊರೆಯಬೇಕಾದುದು ಸುತರಾಂ ಅಪೇಕ್ಷಣೀಯ.

ನೀವು ಹಮ್ಮಿಕೊಂಡ ಕಾರ್ಯ ನಿರ್ವಿಘ್ನವಾಗಿ ಸಾಗಲಿ, ಕಲಾರಾಧನೆಯ ಕೈಂಕರ್ಯ ಸುಗಮವಾಗಿ ನಡೆಯುತ್ತಿರಲಿ, ಕೃತಿ ಸರ್ವಾಂಗ ಸುಂದರವಾಗಿ ಹೊರಬರಲಿ ಎಂದು ನಮ್ಮ ಆರಾಧ್ಯ ಮೂರ್ತಿಗಳಾದ ಶ್ರೀ ದಕ್ಷಿಣಾಮೂರ್ತಿ - ಗೋಪಾಲಕೃಷ್ಣ ಸ್ವಾಮಿ ಸನ್ನಿಧಿಯಲ್ಲಿ ಸಂಪ್ರಾರ್ಥಿಸಿ ಸರ್ವ ಯಶಸ್ಸನ್ನು ಕೋರುತ್ತೇವೆ.

ಇತಿ

ಮೊಕ್ಕಾಂ : ಬೆಂಗಳೂರು — ಶ್ರೀಮನ್ನಾರಾಯಣ ಸ್ಮರಣೆಗಳು
ತಾರೀಕು : 30-3-2006 — ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿ

|| ಅವಧೂತ್ ಚಿಂತನ್ ಗುರುದೇವದತ್ತ್ ||



ಶ್ರೀ ಗುರುದೇವದತ್ತ ಸಂಸ್ಥಾನಮ್, ಒಡಿಯೂರು

(ದಕ್ಷಿಣ ಗಾಣಗಾಪುರ)

ಒಡಿಯೂರು - 574 243, ಬಂಟ್ವಾಳ ತಾಲೂಕು, (ದ. ಕ.)

SHRI GURUDEVADATTA SAMSTHANAM, ODIYOOR

Odiyoor - 574 243, Bantwal Taluk, (D. K.)

ದೂರವಾಣಿ : 266211, 266282 (ಕೋಡ್ : 08255)

ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ

ಯತ್ಸತ್ಯೇನ ಜಗತ್ಸತ್ಯಂ ಯತ್ಪ್ರಕಾಶೇನ ಭಾತಿತತ್ ।
ಯದಾನಂದೇನ ನಂದಂತಿ ತಸ್ಮೈ ಶ್ರೀ ಗುರವೇ ನಮಃ ॥

ರಿಗೆ, ಸಂಪಾದಕರು

'ಯಕ್ಷವಲ್ಲರಿ' ಸಂಕಲನಾ ಗ್ರಂಥ

ಆತ್ಮೀಯರೇ,

ಶ್ರೀಯುತ ಅಂಬೇಮೂಲೆ ಗೋವಿಂದ ಭಟ್ಟರಿಂದ ರಚಿಸಲ್ಪಟ್ಟ ಯಕ್ಷಗಾನ ಪ್ರಸಂಗಗಳು ಹಾಗೂ ಕೆಲವೊಂದು ಮೌಲಿಕ ಲೇಖನಗಳು "ಯಕ್ಷವಲ್ಲರಿ" ಎನ್ನುವ ಸಂಕಲನಾ ಗ್ರಂಥವಾಗಿ ಬೆಳಕು ಕಾಣುತ್ತಿರುವ ವಿಷಯ ವೇದ್ಯವಾಯ್ತು. ಅಭಿನಂದನೆಗಳು.

ಕಲಾವಿದ, ಪ್ರಸಂಗಕರ್ತೃ, ಅನುಭವಿ ಹಾಗೂ ಸಾಮಾಜಿಕ ಕಳಕಳಿಯ ಅಂಬೇಮೂಲೆ ಯವರನ್ನು ನೋಡಿ, ಕೇಳಿ ಬಲ್ಲೆವು. ಅವರ ಇಪ್ಪತ್ತೊಂದು ಪ್ರಸಂಗಗಳನ್ನು, ವೃತ್ತಿ ಬದುಕಿನ ಅನುಭವಗಳನ್ನು ಗ್ರಂಥಸ್ಥವಾಗಿ ಹೊರತರುವುದರಿಂದ ಯಕ್ಷಗಾನ ಪ್ರೇಮಿಗಳಿಗೆ ಇದೊಂದು ಅಮೂಲ್ಯ ಕೈಪಿಡಿಯಾಗಬಹುದು.

ಶ್ರೀಯುತ ಮುಳಿಯ ಶಂಕರ ಭಟ್ಟರ ಸಂಪಾದಕತ್ವದಲ್ಲಿ ಈ ಸದ್ಗ್ರಂಥವು ಯೋಗ್ಯವಾಗಿ ಮೂಡಿಬಂದು ಜನಮಾನಸದಲ್ಲಿ ಉಳಿಯುವಂತಾಗಲಿ. ಕವಿಹೃದಯದಿಂದ ಮೂಡಿರುವ ಕಾವ್ಯಗಳು ಸಮಾಜದ ಉನ್ನತಿಗೆ ಪೂರಕವಾಗಿರಲಿ. ಆರೋಗ್ಯಪೂರ್ಣ ಸಮಾಜ ನಿರ್ಮಾಣದಲ್ಲಿ ಕವಿಯ ಪಾತ್ರ ಮಹತ್ತರವಾದುದು. ಶ್ರೀಯುತರಿಗೆ ಭಗವಂತ ಆಯುರಾರೋಗ್ಯ ಸರ್ವ ಸಂಪತ್ತುಗಳನ್ನಿತ್ತು ಅನುಗ್ರಹಿಸಲಿ.

|| ಶ್ರೀ ಗುರುದತ್ತಾತ್ರೇಯೋ ವಿಜಯತೇ ||

ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ

"ನಾನು, ನನ್ನದು, ನನ್ನಿಂದಾದುದು ಶೂನ್ಯವಾಗಿರಲಿ" - ಗುರುದೇವ

ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು

ನಿಕಟಪೂರ್ವ ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು



ಡಾ. ಅಂಬೇಮೂಲೆ ಗೋವಿಂದ ಭಟ್ಟರ ಕೃತಿಗಳನ್ನು ಸಂಕಲಿಸಿ 'ಯಕ್ಷವಲ್ಲರಿ' ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ಕೃತಿಕರ್ತರ ರಚನೆಗಳು (ಯಕ್ಷಗಾನ ಪ್ರಸಂಗಗಳು ಮತ್ತು ಇತರ) ಸಮಾಜಕ್ಕೆ ತಲಪಬೇಕೆಂಬ ನಿಮ್ಮ ಕಳಕಳಿ ನನಗೆ ಸಂತಸ ತಂದಿದೆ. ಯಕ್ಷಗಾನವು ಜನರನ್ನು ತಲಪುವಷ್ಟು ಸುಲಭದಲ್ಲಿ ಪ್ರಸಂಗ ಕೃತಿಗಳು ಜನರನ್ನು ತಲಪುವುದು ಕಷ್ಟ. ಆದರೂ ನಿಮ್ಮ (ಡಾ. ಅಂಬೇಮೂಲೆ ಕೃತಿ ಪ್ರಕಾಶನ ಸಮಿತಿ) ಸಂಘಟಿತ ಪ್ರಯತ್ನ ಸಾಹಿತ್ಯ ಸೇವೆಯಾಗಿ, ಕಲಾಸೇವೆಯಾಗಿ ಮಹತ್ವದ್ದಾಗಿದೆ. ಗ್ರಂಥ ಸುಂದರವಾಗಿ ಮೂಡಿ ಬರಲಿ. ಮನೋರಂಜನೆ ಮತ್ತು ಆತ್ಮರಂಜನೆಗೆ ಕಾರಣವಾಗುವ ಈ ಒಳ್ಳೆಯ ಕೆಲಸಕ್ಕೆ ಸಹೃದಯಿಗಳು ಪ್ರೋತ್ಸಾಹ ನೀಡಬೇಕು.

ಶುಭವಾಗಲಿ.

ಮೂಲ್ಕಿ, ದ. ಕ.
ದಿನಾಂಕ : 30-3-2006

ಹರಿಕೃಷ್ಣ ಪುನರೂರು

|| ಅವಧೂತ್ ಚಿಂತನ್ ಗುರುದೇವದತ್ತ್ ||

ಶ್ರೀ ಗುರುದೇವದತ್ತ ಸಂಸ್ಥಾನಮ್, ಒಡಿಯೂರು

(ದಕ್ಷಿಣ ಗಾಣಗಾಪುರ)

ಒಡಿಯೂರು - 574 243, ಬಂಟ್ವಾಳ ತಾಲೂಕು, (ದ. ಕ.)

SHRI GURUDEVADATTA SAMSTHANAM, ODIYOOR

Odiyoor - 574 243, Bantwal Taluk, (D. K.)

ದೂರವಾಣಿ : 266211, 266282 (ಕೋಡ್ : 08255)



ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ

ಯತ್ಸತ್ಯೇನ ಜಗತ್ಸತ್ಯಂ ಯತ್ಪ್ರಕಾಶೇನ ಭಾತಿತತ್ ।
ಯದಾನಂದೇನ ನಂದಂತಿ ತಸ್ಮೈ ಶ್ರೀ ಗುರವೇ ನಮಃ ॥

ರಿಗೆ, ಸಂಪಾದಕರು
'ಯಕ್ಷವಲ್ಲರಿ' ಸಂಕಲನಾ ಗ್ರಂಥ

ಆತ್ಮೀಯರೇ,

ಶ್ರೀಯುತ ಅಂಬೇಮೂಲೆ ಗೋವಿಂದ ಭಟ್ಟರಿಂದ ರಚಿಸಲ್ಪಟ್ಟ ಯಕ್ಷಗಾನ ಪ್ರಸಂಗಗಳು ಹಾಗೂ ಕೆಲವೊಂದು ಮೌಲಿಕ ಲೇಖನಗಳು "ಯಕ್ಷವಲ್ಲರಿ" ಎನ್ನುವ ಸಂಕಲನಾ ಗ್ರಂಥವಾಗಿ ಬೆಳಕು ಕಾಣುತ್ತಿರುವ ವಿಷಯ ವೇದ್ಯವಾಯ್ತು. ಅಭಿನಂಡನೆಗಳು.

ಕಲಾವಿದ, ಪ್ರಸಂಗಕರ್ತೃ, ಅನುಭವಿ ಹಾಗೂ ಸಾಮಾಜಿಕ ಕಳಕಳಿಯ ಅಂಬೇಮೂಲೆ ಯವರನ್ನು ನೋಡಿ, ಕೇಳಿ ಬಲ್ಲೆವು. ಅವರ ಇಪ್ಪತ್ತೊಂದು ಪ್ರಸಂಗಗಳನ್ನು, ವೃತ್ತಿ ಬದುಕಿನ ಅನುಭವಗಳನ್ನು ಗ್ರಂಥಸ್ಥವಾಗಿ ಹೊರತರುವುದರಿಂದ ಯಕ್ಷಗಾನ ಪ್ರೇಮಿಗಳಿಗೆ ಇದೊಂದು ಅಮೂಲ್ಯ ಕೈಪಿಡಿಯಾಗಬಹುದು.

ಶ್ರೀಯುತ ಮುಳಿಯ ಶಂಕರ ಭಟ್ಟರ ಸಂಪಾದಕತ್ವದಲ್ಲಿ ಈ ಸದ್ಗ್ರಂಥವು ಯೋಗ್ಯವಾಗಿ ಮೂಡಿಬಂದು ಜನಮಾನಸದಲ್ಲಿ ಉಳಿಯುವಂತಾಗಲಿ. ಕವಿಹೃದಯದಿಂದ ಮೂಡಿರುವ ಕಾವ್ಯಗಳು ಸಮಾಜದ ಉನ್ನತಿಗೆ ಪೂರಕವಾಗಿರಲಿ. ಆರೋಗ್ಯಪೂರ್ಣ ಸಮಾಜ ನಿರ್ಮಾಣದಲ್ಲಿ ಕವಿಯ ಪಾತ್ರ ಮಹತ್ತರವಾದುದು. ಶ್ರೀಯುತರಿಗೆ ಭಗವಂತ ಆಯುರಾರೋಗ್ಯ ಸರ್ವ ಸಂಪತ್ತುಗಳನ್ನಿತ್ತು ಅನುಗ್ರಹಿಸಲಿ.

|| ಶ್ರೀ ಗುರುದತ್ತಾತ್ರೇಯೋ ವಿಜಯತೇ ||

ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ

"ನಾನು, ನನ್ನದು, ನನ್ನಿಂದಾದುದು ಶೂನ್ಯವಾಗಿರಲಿ" - ಗುರುದೇವ



ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು

ನಿಕಟಪೂರ್ವ ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು

ಡಾ. ಅಂಬೇಮೂಲೆ ಗೋವಿಂದ ಭಟ್ಟರ ಕೃತಿಗಳನ್ನು ಸಂಕಲಿಸಿ 'ಯಕ್ಷವಲ್ಲರಿ' ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ಕೃತಿಕರ್ತರ ರಚನೆಗಳು (ಯಕ್ಷಗಾನ ಪ್ರಸಂಗಗಳು ಮತ್ತು ಇತರ) ಸಮಾಜಕ್ಕೆ ತಲಪಬೇಕೆಂಬ ನಿಮ್ಮ ಕಳಕಳಿ ನನಗೆ ಸಂತಸ ತಂದಿದೆ. ಯಕ್ಷಗಾನವು ಜನರನ್ನು ತಲಪುವಷ್ಟು ಸುಲಭದಲ್ಲಿ ಪ್ರಸಂಗ ಕೃತಿಗಳು ಜನರನ್ನು ತಲಪುವುದು ಕಷ್ಟ. ಆದರೂ ನಿಮ್ಮ (ಡಾ. ಅಂಬೇಮೂಲೆ ಕೃತಿ ಪ್ರಕಾಶನ ಸಮಿತಿ) ಸಂಘಟಿತ ಪ್ರಯತ್ನ ಸಾಹಿತ್ಯ ಸೇವೆಯಾಗಿ, ಕಲಾಸೇವೆಯಾಗಿ ಮಹತ್ವದ್ದಾಗಿದೆ. ಗ್ರಂಥ ಸುಂದರವಾಗಿ ಮೂಡಿ ಬರಲಿ. ಮನೋರಂಜನೆ ಮತ್ತು ಆತ್ಮರಂಜನೆಗೆ ಕಾರಣವಾಗುವ ಈ ಒಳ್ಳೆಯ ಕೆಲಸಕ್ಕೆ ಸಹೃದಯಿಗಳು ಪ್ರೋತ್ಸಾಹ ನೀಡಬೇಕು.

ಶುಭವಾಗಲಿ.

ಮೂಲ್ಕಿ, ದ. ಕ.
ದಿನಾಂಕ : 30-3-2006

ಹರಿಕೃಷ್ಣ ಪುನರೂರು



ಶುಭಾಶಯಗಳು

ಶ್ರೀ ರಾಮಾಯಣ, ಮಹಾಭಾರತ, ಪುರಾಣಾದಿಗಳು ಮಾನವರಿಗೆ ಧರ್ಮವನ್ನು ಬೋಧಿಸುವ ಘನ ಉದ್ದೇಶದಿಂದ, ಅವರಲ್ಲಿ ಸದಾಚಾರ ಸುಸಂಸ್ಕೃತಿ ಬೆಳೆಸುವ ಧ್ಯೇಯದಿಂದ ನಿರ್ಮಿತವಾದವು. ಈ ಗ್ರಂಥಗಳಲ್ಲಿರುವ ಸನ್ನಿವೇಶಗಳ ಸ್ವಾರಸ್ಯವನ್ನು ಪಾತ್ರಗಳ ಹಿರಿಮೆಯನ್ನು ಬೇರೆ ಬೇರೆ ರೀತಿಗಳಿಂದ ಪ್ರಚಾರಗೊಳಿಸಿ ಜನರನ್ನು ವಿವೇಕ ಸಂಪನ್ನರಾಗುವಂತೆಸಗಲು ನಮ್ಮ ಪೂರ್ವಜರು ಬಹುವಿಧವಾಗಿ ಪ್ರಯತ್ನಿಸಿದರು. ಪುರಾಣವಾಚನ, ಪ್ರವಚನ, ಹರಿಕೀರ್ತನೆ, ನಾಟಕಾದಿಗಳನ್ನು ನಡೆಸಿದರು - ಜನರು ಉತ್ತಮರು ನಡೆದ ದಾರಿಯಲ್ಲಿ ಕ್ರಮಿಸಬೇಕು, ದುರ್ಜನರ ಮಾರ್ಗವನ್ನು ಹಿಡಿಯ ಬಾರದು ಎಂಬುದಾಗಿ ಬೋಧಿಸಿದರು.

ಪುರಾಣಾದಿ ನಮ್ಮ ಹಿರಿಯ ಗ್ರಂಥಗಳ ಸಾರವನ್ನು ಸಾಮಾನ್ಯ ಜನರಿಗೆ ತಿಳಿಸುವುದರಲ್ಲಿ ಕರ್ನಾಟಕದ ಕೆಲವು ಭಾಗಗಳಲ್ಲಿ ಹಾಗೂ ಕಾಸರಗೋಡು ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ವಿಧಾನಗಳಲ್ಲಿ ಯಕ್ಷಗಾನ ತಾಳಮದ್ದಳೆ ಮತ್ತು ಬಯಲಾಟ ಜನಪ್ರಿಯವಾದವುಗಳು. ಯಕ್ಷಗಾನದಲ್ಲಿ ಪ್ರಸಂಗಕರ್ತರಾಗಿ, ಭಾಗವತರಾಗಿ, ಅರ್ಥಧಾರಿಗಳಾಗಿ, ವೇಷಧಾರಿಗಳಾಗಿ ಪ್ರವರ್ತಿಸಿ ಖ್ಯಾತಿಯನ್ನು ಗಳಿಸಿದವರು ಹಲವರು. ಯಕ್ಷಗಾನದ ಕಲಾವಿದರಾಗಿ ಐಶ್ವರ್ಯವನ್ನು ಸಂಪಾದಿಸಿದವರು ವಿರಳವಾದರೂ, ಧರ್ಮಸಂಸ್ಕೃತಿಗಳನ್ನು ಪ್ರಚಾರಗೊಳಿಸಿದವರು, ಜನರ ಮನಸ್ಸಿಗೆ ಆನಂದವನ್ನು ಕೊಟ್ಟವರು ಅನೇಕರು.

ಈಗಲೀಗ ಯಕ್ಷಗಾನ ಕ್ಷೇತ್ರವು ಬಹುಮುಖವಾಗಿ ಬೆಳೆಯುತ್ತಿದೆ. ಮಕ್ಕಳ ಮೇಳ, ಮಹಿಳೆಯರ ಮೇಳ, ಅನೇಕ ಸಂಘ ಸಂಸ್ಥೆಗಳ ಹೆಸರಲ್ಲಿ ನಡೆಯುವ ಮೇಳಗಳು, ಯಕ್ಷಗಾನ ತಾಳಮದ್ದಳೆಗಳು, ಯಕ್ಷಗಾನ ಸಪ್ತಾಹಗಳು ಇದಕ್ಕೆ ಸಾಕ್ಷಿ.

ಯಕ್ಷಗಾನ ಕ್ಷೇತ್ರದಲ್ಲಿ ಬಹುಮುಖಿವಾಗಿ ದುಡಿಯುವವರು ಶ್ರೀ ಅಂಬೇಮೂಲೆ ಗೋವಿಂದ ಭಟ್ಟರು - ಅವರು ಹಿರಿಯ ಅರ್ಥಧಾರಿಗಳು, ಹಿತ ಮಿತವಾಗಿ ಸರಳವಾದ ಮಾತುಗಳಿಂದ ಪದ್ಯಗಳಿಗೆ ತಕ್ಕ ಅರ್ಥವನ್ನು ಹೇಳುವವರು. ಯಾವುದೇ ಪಾತ್ರವನ್ನು ನಿರ್ವಹಿಸಲಿ, ಪಾತ್ರದ ಗೌರವವನ್ನು ಉಳಿಸುವವರು. ಅವರು ಉತ್ತಮ ಹವ್ಯಾಸಿ ವೇಷಧಾರಿಗಳೂ ಕೂಡ. ಪುರಾಣಾದಿಗಳನ್ನು ಅಭ್ಯಸಿಸಿದ ಶ್ರೀ ಭಟ್ಟರು ಪ್ರವಚನ ಕಲೆಯಲ್ಲಿಯೂ ನಿಪುಣರು.

ಯಕ್ಷಗಾನ ಸಾಹಿತ್ಯ ಭಂಡಾರಕ್ಕೆ ಅವರ ಕೊಡುಗೆ ವಿಶಿಷ್ಟವಾದುದು. ಪ್ರತಿಭಾ ಶಾಲಿಗಳಾದ ಗೋವಿಂದ ಭಟ್ಟರು ಆಶುಕವಿಗಳು. ಅವರಿಂದ ರಚಿತವಾದ ಪ್ರಸಂಗಗಳು ಹಲವಾರು. ಮಕ್ಕಳ ಗುಣಶೀಲಗಳನ್ನು ಬೆಳೆಸುವುದಕ್ಕಾಗಿ ಶಿಶುಸಾಹಿತ್ಯವನ್ನೂ ಶ್ರೀ ಭಟ್ಟರು ರಚಿಸಿರುವರು.

ಅವರು ವೃತ್ತಿಯಿಂದ ಕೃಷಿಕರು, ಕೃಷಿಕಾರ್ಯಗಳಲ್ಲಿಯೂ ಶ್ರೀಯುತರು ಸಮರ್ಥರು - 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬುದನ್ನು ಅರಿತವರು - ವೈದ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿದ ಅವರು ಜನಪ್ರಿಯ ವೈದ್ಯರು. ಆರೋಗ್ಯವನ್ನು ಕಾಪಾಡುವ ವಿಧಾನವನ್ನು ಪ್ರಚಾರಗೊಳಿಸುವುದರಲ್ಲಿ ಅವರಿಗೆ ಬಹಳ ಆಸಕ್ತಿ.

ಗುರುಹಿರಿಯರಲ್ಲಿ ಭಕ್ತಿಯುಳ್ಳ ಶ್ರೀಯುತರು ಉಪಕಾರವನ್ನು ಮರೆಯದವರೂ ಪ್ರಚಾರಕ್ಕೆ ಗಮನ ಹರಿಸದವರೂ ಆದ ಸಜ್ಜನರು.

ಜನಹಿತ ದೇಶಹಿತ ಕಾರ್ಯವನ್ನು ಶ್ರದ್ಧೆಯಿಂದ ಎಸಗುತ್ತಿರುವ ಶ್ರೀ ಅಂಬೇಮೂಲೆ ಗೋವಿಂದ ಭಟ್ಟರನ್ನು ಅಭಿನಂದಿಸಬೇಕು ಎಂಬುದಾಗಿ ಅವರ ಹಿತಚಿಂತಕರೂ ಅಭಿಮಾನಿಗಳೂ ನಿರ್ಣಯಿಸಿದುದು ನಿಜವಾಗಿಯೂ ಸ್ತುತ್ಯ.

ಶ್ರೀಯುತರಿಗೆ, ಅವರ ಕುಟುಂಬದವರಿಗೆ ಶ್ರೀ ಗುರುದೇವತಾನುಗ್ರಹವು ಸಂಪೂರ್ಣ ಒದಗಿ ಬರಲಿ.

ನೀರ್ಚಾಲು
ದಿನಾಂಕ : 30-3-2006

ಖಂಡಿಗೆ ಶಾಮ ಭಟ್ಟ
ಅಧ್ಯಕ್ಷರು
ಡಾ. ಅಂಬೇಮೂಲೆ ಗೋವಿಂದ ಭಟ್ಟರ
ಸಾಹಿತ್ಯ ಪ್ರಕಾಶನ ಸಮಿತಿ

ಡಾ. ಅಂಬೇಮೂಲೆ

ಒಂದು ಅಭಿನಂದನೆ

ಕಾಸರಗೋಡು ತಾಲೂಕು ಕನ್ನಡ, ತುಳು, ಮಲಯಾಳ, ಕೊಂಕಣಿ, ಮರಾಠಿ ಮುಂತಾದ ಹಲವು ಭಾಷೆ ಸಂಸ್ಕೃತಿ ಕಲೆಗಳ ಆಡುಂಬೊಲ. ಈ ಪ್ರದೇಶವನ್ನು ಸಪ್ತ ಭಾಷಾ ಸಂಗಮ ಭೂಮಿ ಎಂದೂ ಕರೆಯುವುದುಂಟು. ಆದರೂ ಸಾಮಾನ್ಯವಾಗಿ ಕನ್ನಡ ತುಳು ಕೊಂಕಣಿ ಮತ್ತು ಮಲಯಾಳಂ ಭಾಷೆಗಳೇ ಮುಂಚೂಣಿಯಲ್ಲಿದ್ದು ಸಾಂಸ್ಕೃತಿಕವಾಗಿ ಕನ್ನಡ ನಾಡೆಂದು ಪರಿಗಣಿಸಲ್ಪಟ್ಟಿದೆ. ಇಲ್ಲಿನ ಜನರ ಮಾತೃಭಾಷೆ ಯಾವುದೇ ಆಗಿರಲಿ ಅವರು ಯಾವುದೇ ಭಾಷೆಯನ್ನಾಡಲಿ ಕನ್ನಡ ಭಾಷೆ, ಕಲೆ ಸಂಸ್ಕೃತಿಗಳನ್ನು ಒಪ್ಪಿಕೊಂಡಿದ್ದಾರೆ ಮತ್ತು ಅದನ್ನು ಬೆಳೆಸಿದ್ದಾರೆ. ವ್ಯವಹಾರದಲ್ಲಿ ಕನ್ನಡ ಭಾಷೆ, ಕಲಾಭಿರುಚಿಯಲ್ಲಿ ಯಕ್ಷಗಾನ, ತಾಳಮದ್ದಳೆ, ಧಾರ್ಮಿಕವಾಗಿ ಭೂತಾರಾಧನೆ, ಹರಿಕಥೆ, ಕ್ರೀಡೆಯಲ್ಲಿ ಕಂಬಳ, ಕೋಳಿಕಟ್ಟ (ಕೋಳಿಅಂಕ) ಮುಂತಾದವುಗಳನ್ನು ತಮ್ಮ ಬದುಕಿನ ಭಾಗವಾಗಿ ಸ್ವೀಕರಿಸಿದ್ದಾರೆ. ಇದಲ್ಲದೆ ಶ್ರೀಮಂತವಾದ ಜಾನಪದವನ್ನೂ ಇಲ್ಲಿಯ ಜನ ಹೊಂದಿದ್ದಾರೆ. ಕಾವ್ಯ, ನೃತ್ಯ, ಚಿತ್ರಕಲೆ ನಾಟಕಾದಿ ಶಿಷ್ಟ ಕಲೆಗಳನ್ನು ಬೆಳೆಸುವುದರೊಂದಿಗೆ ಪಾಡ್ದನ, ಸೋಬಾನೆ, ಓಬೇಲೆ ಹಾಡುಗಳು ಕಳಿಪಾಟುಗಳು, ಗಾದೆ, ಒಗಟುಗಳು ಮುಂತಾದ ಜನಪದ ಸಾಹಿತ್ಯ ರೂಪಗಳನ್ನು ಕೃಷಿ, ವೈದ್ಯಕ ಕುಶಲ ಕಲೆಗಳು ಚಿತ್ರಕಲೆ ಮುಂತಾದ ಇತರ ಜಾನಪದಗಳನ್ನು ರಕ್ತಗತವಾಗಿಸಿಕೊಂಡು ತಮ್ಮ ಬದುಕನ್ನು ಹಸನುಗೊಳಿಸಿದ್ದಾರೆ. ಇಲ್ಲಿನ ವೈವಿಧ್ಯಮಯ ಬದುಕಿನಲ್ಲೂ ಒಂದು ಸುಂದರ ಸಾಂಗತ್ಯಮಯ ಸಮನ್ವಯವನ್ನು ಸಾಧಿಸಿಕೊಂಡ ಪ್ರದೇಶಗಳು ಬಹಳ ಅಪರೂಪ. "ವೈವಿಧ್ಯದಲ್ಲಿ ಏಕತೆ" ಎಂದರೇನು ಎಂಬುದಕ್ಕೆ ಕಾಸರಗೋಡು ಅತ್ಯಂತ ಸೂಕ್ತವಾದ ಉದಾಹರಣೆ.

ಯಕ್ಷಗಾನ ಇಲ್ಲಿಯ ಹೆಮ್ಮೆಯ ಕಲೆ ಮತ್ತು ಪ್ರಾಚೀನ ಕಲೆ. ಪಾರ್ತಿಸುಬ್ಬನಿಂದ ಮೊದಲ್ಗೊಂಡು ಸಾವಿರಾರು ಹಿರಿಯ ಕಿರಿಯ ಯಕ್ಷಗಾನ ಕಲಾವಿದರು ಈ ಮಣ್ಣಿನಲ್ಲಿ

ಆಗಿಹೋಗಿದ್ದಾರೆ. ಇವರಲ್ಲಿ ಅಸಂಖ್ಯ ಪ್ರಸಂಗಕರ್ತರು ಭಾಗವತರು, ಕಲಾವಿದರು, ಹಿಮ್ಮೇಳದವರು ಸೇರಿದ್ದಾರೆ. ಇಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಯೂ ಯಕ್ಷಗಾನ ಕಲಾಸ್ವಾದಕನಾಗಿದ್ದಾನೆ, ಪೋಷಕನಾಗಿದ್ದಾನೆ, ರಸಿಕನಾಗಿದ್ದಾನೆ. ಒಟ್ಟಿನಲ್ಲಿ ಯಕ್ಷಗಾನವೆಂಬುದು ಕಾಸರಗೋಡಿನ ಜನರ ರಕ್ತದಲ್ಲಿ ಸೇರಿ ಹೋಗಿದೆ ಎಂದರೆ ಅತಿಶಯೋಕ್ತಿಯಲ್ಲ. ದೀಪಾವಳಿ ಹಬ್ಬದ ಪಾಡ್ಯದಂದು ಗೆಜ್ಜೆಕಟ್ಟಿ ಯಕ್ಷಗಾನ ಮೇಳಗಳು ತಿರುಗಾಟಕ್ಕೆ ಹೊರಟರೆ ಪತ್ತನಾಜೆಯಂದು ಸೇವೆ ಆಟ ಆಡಿ ಗೆಜ್ಜೆ ಬಿಚ್ಚುವ ತನಕ ಬಯಲಾಟಗಳು ನಡೆದರೆ ಮಳೆ ಸುರಿಯತೊಡಗಿದರೆ ದೊಂದಿಗಳನ್ನೊ, ಗೇಸ್‌ಲೈಟುಗಳನ್ನೊ ಹಿಡಿದುಕೊಂಡು ಸ್ತ್ರೀವೇಷಗಳೊಂದಿಗೆ ಮನೆ ಮನೆ ಸಂದರ್ಶಿಸುವುದೂ ಇಲ್ಲಿಯ ವಾಡಿಕೆ. ಅದರ ಜೊತೆಗೆ ಪ್ರತೀ ಊರುಗಳಲ್ಲೂ ದೇವಸ್ಥಾನದ ಗೋಪುರಗಳಲ್ಲಾಗಲೀ, ಮನೆಯ ಜಗಲಿಗಳಲ್ಲಾಗಲೀ ಯಕ್ಷಗಾನದ ಇನ್ನೊಂದು ರೂಪವಾದ ತಾಳಮದ್ದಳೆಯು ನಿರಂತರವಾಗಿ ನಡೆಯುತ್ತಿರುತ್ತದೆ. ಹೀಗೆ ಯಕ್ಷಗಾನ ಒಂದಲ್ಲ ಒಂದು ಅವತಾರವನ್ನೆತ್ತಿ ಹೆಚ್ಚು ಕಡಿಮೆ ವರ್ಷವಿಡೀ ಈ ಜನರಿಗೆ ಪುರಾಣ ಕಥೆಗಳ ಮೂಲಕ ಮನರಂಜನೆ, ಜ್ಞಾನ ಸಂಸ್ಕಾರಗಳನ್ನು ನೀಡುತ್ತಾ ಬರುತ್ತಿದೆ. ಇಂದಿನ ಅತ್ಯಾಧುನಿಕ ಬದುಕಿನಲ್ಲೂ ಯಕ್ಷಗಾನದ ಆಕರ್ಷಣೆ ಮತ್ತು ಮಹತ್ವ ಕಡಿಮೆಯಾಗಿಲ್ಲ ಇದು ನಮ್ಮ ಭಾಗ್ಯ.

ಕಾಸರಗೋಡಿನ ಯಕ್ಷಗಾನ ಕಲಾ ತಪಸ್ವಿಗಳ ಸಾಲಿನಲ್ಲಿ ಅತ್ಯಂತ ಅರ್ಹ ಸ್ಥಾನವನ್ನು ಪಡೆದ ಹಲವರಿದ್ದಾರೆ. ಅವರಲ್ಲಿ ಕೆಲವರ ಹೆಸರು ಇತಿಹಾಸದಲ್ಲಿ ಕಣ್ಮರೆಯಾಗಿದೆ. ಕೆಲವರು ಇಂದಿಗೂ ಜನರ ನೆನಪಿನಲ್ಲಿ ಉಳಿದುಕೊಂಡಿದ್ದಾರೆ. ಇನ್ನೂ ಕೆಲವರು ಇಂದಿಗೂ ಜೀವಂತವಾಗಿ ಕಲಾಸೇವೆಯಲ್ಲಿ ನಿರತರಾಗಿದ್ದಾರೆ. ಅಂತಹಾ ವಯೋವೃದ್ಧ ಜ್ಞಾನವೃದ್ಧ ಕಲಾವಿದರಲ್ಲಿ ಡಾ. ಅಂಬೇಮೂಲೆ ಗೋವಿಂದ ಭಟ್ಟರು ಒಬ್ಬರು.

ಕಾಸರಗೋಡು ತಾಲೂಕಿನ ಕಾರಡ್ಕ ಗ್ರಾಮದ ಅಂಬೇಮೂಲೆಯಲ್ಲಿರುವ ಗೋವಿಂದ ಭಟ್ಟರು ಮೂಲದಲ್ಲಿ, ಕಡೆಂಗೋಡ್ಲು ಮನೆತನದ ವೈಕ್ಯಾನ ತೆಕ್ಕೇಕರೆ ಶ್ರೀ ರಾಮಭಟ್ಟರ ನಾಲ್ಕು ಮಂದಿ ಗಂಡು ಮಕ್ಕಳಲ್ಲಿ ಕೊನೆಯವರು. (ಜನನ : 29-12-1934) ಕೃಷಿ ಪರಂಪರಾಗತವಾಗಿ ಬಂದ ವೃತ್ತಿ. ವೈದ್ಯಕೀಯ ಇವರ ಹವ್ಯಾಸ. ಯಕ್ಷಗಾನ ಇವರ ಅಭಿರುಚಿಯ ಕ್ಷೇತ್ರ. ಕನ್ನಡ, ತುಳು, ಹವ್ಯಕ, ಮಲಯಾಳ ಭಾಷೆಗಳಲ್ಲಿ ಹುಲುಸಾಗಿ ಸಾಹಿತ್ಯ ವ್ಯವಸಾಯ ಮಾಡಿದ - ಮಾಡುತ್ತಿರುವ ಈ ಪ್ರತಿಭಾ

ಸಂಪನ್ನರು ಯಕ್ಷಗಾನದಲ್ಲಿ ಪ್ರಸಂಗಕರ್ತರಾಗಿ ಅರ್ಥದಾರಿಗಳಾಗಿ ಐವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಸಾರ್ಥಕ ಸೇವೆ ಸಲ್ಲಿಸಿದವರು. ಜೊತೆಗೆ ನಟರಾಗಿ, ಗಮಕಿಯಾಗಿ, ಪ್ರವಚನಗಾರರಾಗಿ ಕೂಡಾ ಪ್ರಸಿದ್ದರು. ಕವಿಯಾಗಿ ಕಲಾವಿದರಾಗಿ ಪ್ರಸಿದ್ಧರಾದ ಅಂಬೇಮೂಲೆಯವರು ಕವಿ ಹೃದಯವನ್ನು ಸಮರ್ಥವಾಗಿ ಅರ್ಥೈಸಿಕೊಳ್ಳುವ ವಿದ್ವಾಂಸರು. ತಮ್ಮ ಸಾಹಿತ್ಯ ರಚನೆಗಳಲ್ಲಿ - ಮುಖ್ಯವಾಗಿ ಯಕ್ಷಗಾನ ಪ್ರಸಂಗಗಳಲ್ಲಿ ಕಾವ್ಯ ಸೌಂದರ್ಯವನ್ನು ಚೊಕ್ಕವಾಗಿ ಅಭಿವ್ಯಕ್ತಗೊಳಿಸಿದ ಕಲಾ ತಪಸ್ವಿಗಳು. ಜೀವನ ಮೌಲ್ಯಗಳ ಪ್ರತಿಪಾದನೆಯ ಮೂಲಕ ಜನರ ಬದುಕನ್ನು ಸಂಪನ್ನಗೊಳಿಸಿದವರು. ಯಕ್ಷಗಾನ ತಾಳಮದ್ದಳೆ ರಂಗಗಳಲ್ಲಿ ವಿವಿಧ ಪಾತ್ರಗಳಿಗೆ ಜೀವ ತುಂಬಿರುವ ಪ್ರತಿಭಾನ್ವಿತರು ಜನಮನಕ್ಕೆ ಮನೋರಂಜನೆಗಳನ್ನು ನೀಡುತ್ತಿರುವ ಯಕ್ಷಗಾನ ಕಲಾ ಪ್ರಕಾರವಾದ ಪ್ರಸಂಗ ಸಾಹಿತ್ಯಕ್ಕೆ ವಿಶೇಷವಾದ ಕೊಡುಗೆಯನ್ನಿತ್ತವರು. ಶ್ರೀಯುತರು ಕನ್ನಡ, ತುಳು, ಹವ್ಯಕ, ಮಲಯಾಳ ಭಾಷೆಗಳಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಕಥನಗಳನ್ನೊಳಗೊಂಡ ಅನೇಕ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ.

ಯಕ್ಷಗಾನ ಪ್ರಸಂಗ ರಚನಾ ಕ್ಷೇತ್ರದಲ್ಲಿ ಇಷ್ಟು ಶ್ರೀಮಂತ ಕೃಷಿ ಮಾಡಿದವರು ಬಹಳ ವಿರಳ. ಎಷ್ಟೋ ಮಂದಿ ಹಿರಿಯರು ಇದ್ದಿರಬಹುದಾದರೂ ಅವರ ಹೆಸರು ಎಲ್ಲೂ ದಾಖಲೆಯಾಗದೆ, ಕೃತಿಗಳು ಪ್ರಕಟವಾಗದೆ, ಇತಿಹಾಸ ಗರ್ಭದಲ್ಲಿ ಕಣ್ಮರೆಯಾದ ಉದಾಹರಣೆಗಳಿವೆ. ಈ ಹಿನ್ನೆಲೆಯಲ್ಲಿ ಯಕ್ಷ ಶಾರದೆಯ ಮಡಿಲಿಗೆ ಅನೇಕ ಕೃತಿಗಳ ಒಸಗೆಯನ್ನಿತ್ತ ಅಂಬೇಮೂಲೆಯವರ ಬಹಳಷ್ಟು ಕೃತಿಗಳು ಶ್ರೋತೃಗಳನ್ನು ರಂಜಿಸಿರಬಹುದಾದರೂ ವ್ಯಾಪಕವಾಗಿ ಓದುಗರಿಗಿನ್ನೂ ಲಭ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ಕುಟುಂಬದವರು ಬಂಧು ಬಳಗದವರು ಒಟ್ಟಾಗಿ ಅವರ ಪ್ರಸಂಗ ಸಾಹಿತ್ಯ ಪ್ರಕಟಣೆಯ ಸತ್ಕಾರ್ಯಕ್ಕೆ ಮುಂದಾಗಿದ್ದೇವೆ. ಈ ಸದುದ್ದೇಶದಿಂದ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತಿ ಮಹಾ ಸ್ವಾಮಿಗಳವರ ಗೌರವಾಧ್ಯಕ್ಷತೆಯಲ್ಲಿ ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯ ಪ್ರಕಾಶನ ಸಮಿತಿ ರೂಪುಗೊಂಡಿದೆ. ಮೊದಲೇ ಸೂಚಿಸಿದಂತೆ ಅಂಬೇಮೂಲೆಯವರ ಮುಖ್ಯ ಹಾಗೂ ಲಭ್ಯವಿರುವ ಕೃತಿಗಳನ್ನು ಒಂದು ಸಂಪುಟವಾಗಿ ಪ್ರಕಟಿಸಿ ಅದನ್ನು ಯಕ್ಷಗಾನ ಪ್ರಪಂಚಕ್ಕೆ ಅರ್ಪಿಸುವ ಸದುದ್ದೇಶ ಈ ಸಮಿತಿಯದ್ದು. ಗುರಿ ದೊಡ್ಡದು, ಶ್ರಮ ಅಗಣಿತ. ಆದರೆ ಯಕ್ಷಗಾನ ಹಾಗೂ ಸಾಹಿತ್ಯಾಭಿಮಾನಿಗಳ ಸಹಕಾರದಿಂದ

ನಮ್ಮ ಈ ಪ್ರಯತ್ನ ಹೂ ಎತ್ತಿದಂತೆ ಹಗುರವಾಗಿದೆ. ಕಾಣದ ಕೈಗಳು ಸಹಾಯ ಮಾಡಿವೆ. ಇದು ಕೇವಲ ನಮ್ಮ ಕೆಲವರ ಪ್ರಯತ್ನದ ಫಲ ಮಾತ್ರವಲ್ಲ ಸಮಸ್ತ ಕಲಾಭಿಮಾನಿಗಳ ಹರಕೆ ಹಾರೈಕೆಗಳ ಫಲವೂ ಹೌದು. ಯಕ್ಷಗಾನದ ಸತ್ವದ ಸಾಕಾರವೂ ಹೌದು. ಪರಮ ಪೂಜ್ಯ ಸ್ವಾಮಿಗಳವರ ಅಖಂಡ ಬೆಂಬಲ ಹಾಗೂ ಆಶೀರ್ವಾದದ ಮೂರ್ತ ಸ್ವರೂಪವೂ ಕೂಡಾ. ಅಂತು ಹಲವು ಕಾಲದ ನಮ್ಮ ಕನಸು ಸಮಸ್ತ ಜನಕೋಟಿಯ ಹರಕೆ ಹಾರೈಕೆಗಳ ಮೂಲಕ ಇಂದು ನನಸಾಗುತ್ತಿದೆ. ಹೊರಟ ಕೆಲಸವನ್ನು ಇದೀಗ ಮುಗಿಸಿ ನಾವು ಕೃತಕೃತ್ಯರಾಗಿದ್ದೇವೆ.

ಈ ಮಹತ್ಕಾರ್ಯದಲ್ಲಿ ವಿವಿಧ ರೀತಿಯ ನೆರವನ್ನಿತ್ತ ಅಸಂಖ್ಯ ಯಕ್ಷಗಾನ ಅಭಿಮಾನಿಗಳಿಗೆ ಸಹಕರಿಸಿದ ಪ್ರಕಟಣಾ ಸಮಿತಿಯ ಹತ್ತು ಹಲವು ಪದಾಧಿಕಾರಿಗಳು ಕೃತಿ ಸಂಪಾದನಾ ಸಮಿತಿಯ ಸದಸ್ಯರು, ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ವಿಟ್ಲದ ಹನುಮಾನ್ ಪ್ರಿಂಟರ್ಸ್‌ನ ಮ್ಹಾಲಕರು ಹಾಗೂ ಸಿಬ್ಬಂದಿ ವರ್ಗಕ್ಕೆ ಸಮಿತಿಯ ಪರವಾಗಿ ತುಂಬು ಹೃದಯದ ಕೃತಜ್ಞತೆಗಳು.

ತೆಕ್ಕೆಕರೆ ಶಂಕರ ನಾರಾಯಣ ಭಟ್
ಕಾರ್ಯದರ್ಶಿ
ಡಾ. ಅಂಬೇಮೂಲೆ ಗೋವಿಂದ ಭಟ್ಟರ
ಸಾಹಿತ್ಯ ಪ್ರಕಾಶನಾ ಸಮಿತಿ

ಅಭಿವಾದನ

ಪರಂಪರೆಯಿಂದ ಬಂದ ಆಯುರ್ವೇದ ವೈದ್ಯ ಪದ್ಧತಿ ಮತ್ತು ಹೋಮಿಯೋ ಚಿಕಿತ್ಸೆಯನ್ನು ಮನೆಯಲ್ಲೇ ಆರಂಭಿಸುವುದರೊಂದಿಗೆ 'ಕೃಷಿ'ಯನ್ನೂ ಜತೆಗೂಡಿಸಿ ಜೀವನ ನಿರ್ವಹಿಸಿದವ ನಾನು. ಇದರೊಂದಿಗೆ ಯಕ್ಷಗಾನ ಪ್ರಸಂಗ ರಚನೆ, ಸಾಹಿತ್ಯ ವ್ಯವಸಾಯ ಹಾಗೂ ಬಣ್ಣದ ಬದುಕಿನ ಒಲವು ನನ್ನಲ್ಲಿ ಬೆಳೆದು ಬಂದಿರುವುದು ಸತ್ಯ.

ಬಾಲ್ಯದಲ್ಲಿ ಬೆಳ್ಳಾರೆಯಲ್ಲಿ ಕಲಿಯುತ್ತಿದ್ದ ವೇಳೆ ದಿ. ದಾಮೋದರ ಮಂಡೆಚ್ಚರ ಭಾಗವತಿಕೆಯಲ್ಲಿ ಆಗಾಗ ನಡೆಯುತ್ತಿದ್ದ ಕೂಟಗಳಿಂದ ಯಕ್ಷಗಾನದ ಆಕರ್ಷಣೆ ನನಗೆ ಪ್ರಬಲವಾಯಿತೆನ್ನಬೇಕು. ಆ ಆಕರ್ಷಣೆಯೇ ಅಭಿರುಚಿಯಾಗಿ ಶ್ರಮವಹಿಸಲು ಕಾರಣವಾಯಿತೇನೋ ! ಅನಂತರ ನಮ್ಮೂರಲ್ಲಿ ನಡೆದ ಒಂದು ಕೂಟದಲ್ಲಿ ಅನಿರೀಕ್ಷಿತವಾಗಿ ನಾನು ಪಾತ್ರ ನಿರ್ವಹಿಸಬೇಕಾಗಿ ಬಂದಿತು. ಅಲ್ಲಿಂದ ಅರ್ಥಗಾರಿಕೆಯ ಸಾಧನೆ ಹೆಚ್ಚಿತೆಂದು ತಿಳಿಯುತ್ತೇನೆ. ಈ ಯಕ್ಷಗಾನದ ಅತೀವ ಆಸಕ್ತಿಯೇ ಯಕ್ಷಗಾನದ ಅಭಿಮಾನಿ ಸ್ನೇಹಿತರ ಸಹಕಾರದೊಂದಿಗೆ ಮುಂಡೋಳು ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಸಂಘ ನಿರ್ಮಾಣ, ಆ ಸಂಸ್ಥೆಯ ರಿಜಿಸ್ಟ್ರಿಯ ಕಾರ್ಯಕ್ಕೆ ಕಾರಣವಾಯಿತು. ಆ ಸಮಯದಲ್ಲಿ ದಿ. ಅಮ್ಮಂಕಲ್ಲು ಕೃಷ್ಣಭಟ್ಟ, ಡಾ. ಎನ್. ಎಸ್. ಕೃಷ್ಣಭಟ್ಟ ಮತ್ತು ಶ್ರೀ ರಾಮಚಂದ್ರ ಬಲ್ಲಾಳರು ನೀಡಿದ ಸಹಕಾರ ಸದಾ ಸ್ಮರಣೀಯ. ಹೀಗೆ ಮುಂದುವರಿದ ಕಲಾ ಪ್ರೀತಿ ನಾಟ್ಯಾಭ್ಯಾಸವನ್ನು ಮಾಡಿಸಿತು.

ಮೊದಲಿಗೆ 'ರಾಜಹಂಸ ವಿಜಯ' ಎಂಬ ಪ್ರಸಂಗವನ್ನು ರಚಿಸಿದೆ. ಆ ಕೃತಿ 1963ರಲ್ಲಿ ಶ್ರೀಮಾನ್ ಖಂಡಿಗೆ ಶ್ಯಾಮ ಭಟ್ ಎಂ. ಎ. ಇವರ ಮುನ್ನುಡಿಯೊಂದಿಗೆ ಮಿತ್ರರಾದ ಎನ್. ಎಸ್. ಕೃಷ್ಣ ಭಟ್ಟರ ಪ್ರಾಯೋಜಕತ್ವದಲ್ಲಿ ಪ್ರಕಟಗೊಂಡಿತು. 1964ರಲ್ಲಿ 'ಜಯವಿಜಯ' ಎಂಬ ಪ್ರಸಂಗ ಕಯ್ಯಾರ ಕಿಞ್ಞಣ್ಣ ರೈ ಎಂ. ಎ. ಇವರ ಮುನ್ನುಡಿಯೊಂದಿಗೆ ಪ್ರಕಾಶನಗೊಂಡಿತು. ಆ ಮೊದಲು ಮತ್ತು ಅನಂತರ ರಚಿತವಾದ

ಹಲವಾರು ಪ್ರಸಂಗಗಳು, ಬಿಡಿ ಸಾಹಿತ್ಯಗಳು, ಪುರಾಣೋಕ್ತ ಕಥೆಗಳನ್ನೊಳಗೊಂಡ ಪದ್ಯಗಳು ಅಚ್ಚು ಕಾಣುವ ಯೋಗ ಬಾರದೆ ಹಾಗೇ ಇದ್ದುವು.

ಪುರಾಣೇತಿಹಾಸಗಳಲ್ಲಿ ಅಡಕವಾಗಿದ್ದು, ಪ್ರಸಂಗ ರಚನೆಯಾಗದ ಕಥೆಗಳನ್ನು ಆಯ್ದು ಯಕ್ಷಗಾನಕ್ಕೆ ಒಪ್ಪುವಂತೆ ಮೂಲಕತೆಗೆ ಕುಂದುಂಟಾಗದಂತೆ ಪ್ರಸಂಗ ರಚಿಸುವ ಹಂಬಲ ನನ್ನದಾಗಿತ್ತು. ಅದರಂತೆ ಕೆಲವು ಕೃತಿ ರಚಿತವಾದವುಗಳು. "ತಪತಿ ಸಂವರಣ" ಪ್ರಸಂಗಕ್ಕೆ ಅಡ್ಕ ಗೋಪಾಲಕೃಷ್ಣ ಭಟ್ಟರೂ, "ಶ್ರೀಕೃಷ್ಣ ತುಲಾಭಾರ"ಕ್ಕೆ ಶಂ ನಾಡಿಗ ಕುಂಬ್ಳೆ ಮತ್ತು "ಸುಬ್ರಹ್ಮಣ್ಯ ಕ್ಷೇತ್ರ ಮಹಾತ್ಮೆ"ಗೆ ಶ್ರೀಧರರೂ ಕಥೆ ಸಂಗ್ರಹಿಸಿ ಉಪಕರಿಸಿದ್ದಾರೆ. ಅವರನ್ನು ನೆನಪಿಸುತ್ತೇನೆ. ಅದು ನನ್ನ ಕರ್ತವ್ಯವೂ ಹೌದು.

ಸಾಮಾಜಿಕ ಪ್ರಸಂಗ ರಚನೆಗೆ ನನಗೆ ವಿಶೇಷ ಒಲವು ಇರಲಿಲ್ಲ. ಆದರೆ ನನ್ನ ಗುರುಗಳಾಗಿದ್ದ ಕೊಲ್ಲಂಪಾರೆ ದಿ. ಶಂಕರನಾರಾಯಣ ಭಟ್ಟರ ಒತ್ತಾಸೆಯಂತೆ ಯಕ್ಷಗಾನ "ಪೋರ್ಜರಿ ಪ್ರಸಂಗ", "ಅಕ್ಷರ ವಿಜಯ", " ವಕ್ಕಲು ಮಸೂದೆ" - ಮುಂತಾದ ಕೃತಿಗಳು ರಚನೆಯಾದವು. ಕೆಲಮಂದಿ ಮಿತ್ರರ ಅಪೇಕ್ಷೆಯಂತೆ "ಪರಕೆದ ಪೂಜೆ", "ವಿಷ್ಣುಮೂರ್ತಿ ದೈವ ಮಹಾತ್ಮೆ", "ಛತ್ರಪತಿ ಶಿವಾಜಿ"ಯಂತಹ ಕೃತಿಗಳು ನಿರ್ಮಾಣವಾದವು. ಧ್ವನಿ ಸುರುಳಿಗಾಗಿ "ವೀರ ದಶರಥ", "ಕಾಲನೇಮಿ ಕಾಳಗ", "ಮಿತ್ರವಿಂದಾ ಕಲ್ಯಾಣ", "ಒಡಿಯೂರು ಕ್ಷೇತ್ರ ಮಹಾತ್ಮೆ" ಮತ್ತು "ಕಾರ್ತವೀರ್ಯ", "ಸುಭದ್ರಾ ಕಲ್ಯಾಣ", "ಸತ್ಯಾನ್ವೇಷಣೆ" (ಹವ್ಯಕ ಭಾಷೆಯಲ್ಲಿ) ಪ್ರಸಂಗಗಳನ್ನು ಬರೆಯಲಾಯಿತು. ಯಕ್ಷಗಾನ "ಪೋರ್ಜರಿ ಪ್ರಸಂಗ"ದಲ್ಲಿ ಬರೆದ ಕರ್ನಾಡ ಭಾಷೆಯ ಪದ್ಯಗಳನ್ನು ಬಡಕ್ಕೇಕರೆ ದಿ. ಗೋವಿಂದ ಭಟ್ಟರು ಸರಿಪಡಿಸಿ ಉಪಕಾರ ಮಾಡಿದ್ದಾರೆ. ಹಾಗೆಯೇ ನಾಟೆಕಲ್ಲು ದೇವಾನಂದ ಶೆಟ್ಟಿ ಮಾಸ್ತರರು, ಯತೀಶ್ ಕುಮಾರ ಮಾಸ್ತರರು 'ಪರಕೆದ ಪೂಜೆ'ಯ ಕೃತಿಯಲ್ಲಿದ್ದ ಲೋಪದೋಷಗಳನ್ನು ತಿದ್ದುವಲ್ಲಿ ನೆರವಾಗಿದ್ದಾರೆ. ಈ ಈರ್ವರು ಮಹನೀಯರು ಸ್ಮರಣೀಯರು.

ಹಾಗೆಯೇ ನನ್ನ ಅಣ್ಣ ಶ್ರೀ ಕೃಷ್ಣ ಭಟ್ಟರು (ಅಂಬೇಮೂಲೆ) ಪುರಾಣ ಕಥೆಗಳ ಬಗ್ಗೆ ಖಚಿತ ಮಾಹಿತಿ ಮಾರ್ಗದರ್ಶನ ನೀಡಿ ನನ್ನನ್ನು ಬೆಳೆಸಿದವರು. ತಮ್ಮ ಆಳವಾದ ಅನುಭವವನ್ನು ಧಾರೆಯೆರೆದು ನನ್ನ ಕಲಾವ್ಯವಸಾಯಕ್ಕೆ ಪೋಷಣೆ ಒದಗಿಸಿದವರು. ಆ ಚೇತನಕ್ಕೆ ಪೂಜ್ಯ ಭಾವದಿಂದ ನಮಸ್ಕರಿಸುತ್ತೇನೆ.

ಮುಳಿಯ ದಿ. ತಿಮ್ಮಪ್ಪಯ್ಯನವರ ಶತಮಾನೋತ್ಸವದ ಕವಿಗೋಷ್ಠಿಗೆ ಬರೆದ

ಪದ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಶ್ರೀ ಪಾದಂಗಳವರ ಸ್ವಾಗತಕ್ಕೆ ರಚಿಸಿದ ಸ್ತುತಿ ಮತ್ತಿತರ ಅನೇಕ ರಚನೆಗಳು ಮೂಲೆಗುಂಪಾಗಿಯೇ ಇದ್ದುವು. ಇದನ್ನು ಮನಗಂಡ ಸಾಹಿತ್ಯಾಭಿಮಾನಿಗಳು, ಕಲಾಭಿಮಾನಿಗಳು, ನನ್ನ ಕುಟುಂಬದ ಸಹೃದರು - ಬಂಧು ಬಳಗದವರು ನನ್ನ ಸಿದ್ಧ ಕೃತಿಗಳನ್ನು ಪ್ರಕಾಶ ಪಡಿಸುವ ಮನ ಮಾಡಿದರು. ಪೂಜ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಶ್ರೀ ಪಾದಂಗಳವರು ಗೌರವಾಧ್ಯಕ್ಷರಾಗಿ, ಶ್ರೀ ಖಂಡಿಗೆ ಶ್ಯಾಮಭಟ್ಟರ ಅಧ್ಯಕ್ಷತೆಯಲ್ಲಿ ಸಮಿತಿ ರೂಪಿಸಿ ಕಾರ್ಯಪ್ರವೃತ್ತರಾದುದು ನನ್ನ ಸುಯೋಗವೆಂದು ತಿಳಿಯುತ್ತೇನೆ. ಕಲೆ - ಸಾಹಿತ್ಯದ ಆಶ್ರಯದಾತರೂ, ಪೋಷಕರೂ ಆಗಿರುವ ಪೂಜ್ಯ ಶ್ರೀ ಶ್ರೀ ಕೇಶವಾನಂದ ಭಾರತೀ ಸ್ವಾಮಿಗಳು, ಎಡನೀರು ಮಠ, ಇವರ ಆಶೀರ್ವಾದ - ಅನುಗ್ರಹ ನನ್ನ ಸುಕೃತವೆಂದು ಭಾವಿಸುವೆ. ಹಾಗೆಯೇ ಒಡಿಯೂರು ಸಂಸ್ಥಾನದ ಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರ ಕಾರುಣ್ಯ ಕೃತಿ ರಚನೆಗೆ ಪ್ರಾಪ್ತಿಸಿದೆ. ಇವರೆಲ್ಲರಿಗೂ ಅಭಿವಾದನ ಸಲ್ಲಿಸುತ್ತೇನೆ.

ಕೃತಿ ಸಂಪಾದನಾ ಸಮಿತಿಯ ಸನ್ಮಿತ್ರರಿಗೆ ನನ್ನ ನೆನಕೆಗಳು ಸಲ್ಲುತ್ತವೆ. ಈ ಕಾರ್ಯದ ಹಿನ್ನಲೆಯಲ್ಲಿ ಶ್ರಮವಹಿಸಿದ ಎಲ್ಲ ಹಿರಿಯ - ಕಿರಿಯ ಅಭಿಮಾನಿ ಬಳಗದವರಿಗೆ ವಂದನೆಗಳು.

- ಡಾ. ಅಂಬೇಮೂಲೆ ಗೋವಿಂದ ಭಟ್

(ವಿ. ಸೂ. : ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಸಂಗಗಳ ಪ್ರದರ್ಶನಕ್ಕೆ ಆಯಾ ಕ್ಷೇತ್ರದ ಮುಖ್ಯಸ್ಥರ ಅನುಮತಿ ಪಡೆಯತಕ್ಕದ್ದು.)

ವಲ್ಲರಿ ಚಿಗುರುವ ಮುನ್ನ...

ಹಿರಿಯ ಕಲಾವಿದ ಶ್ರೀ ಅಂಬೇಮೂಲೆ ಗೋವಿಂದ ಭಟ್ಟರ ಯಕ್ಷಗಾನ ಪ್ರಸಂಗ ಮತ್ತಿತರ ಬಿಡಿ ಸಾಹಿತ್ಯವನ್ನು ಪ್ರಕಟಿಸುವ ಸದುದ್ದೇಶದಿಂದ ರೂಪುಗೊಂಡ ಸಮಿತಿ ಗುರುತರ ಕೆಲಸಕ್ಕೆ ಮುಂದಾಗಿದೆ. ಯಕ್ಷಗಾನದ ನನ್ನ ವ್ಯವಸಾಯಕ್ಕಿಂತಲೂ ನನಗದರ ಮೇಲಿರುವ ಪ್ರೀತಿಯ ಕಾರಣದಿಂದ ಮಾತ್ರವೇ ಇದರ ಸಂಪಾದಕತ್ವ ನನ್ನ ಪಾಲಿಗೆ ಬಂದಿರಬಹುದೆಂದು ಭಾವಿಸುತ್ತೇನೆ. ಯಕ್ಷಗಾನದ ಮೇಳಗಳು, ಕಲಾವಿದರು, ಯಕ್ಷಗಾನ ಸಾಹಿತ್ಯ - ಇವೆಲ್ಲವುಗಳ ಸದ್ಯದ ಸ್ಥಿತಿ ಗತಿಯೇನು ಎಂಬುದು ಚಿಂತನೆಗೆ ಗ್ರಾಸ. ಹಿಂದೆ ಇದ್ದ ವಾತಾವರಣ ಬದಲಾಗಿದೆ. ಇಂದು ಯಕ್ಷಗಾನದ ಎಲ್ಲಾ ಅಂಗಗಳ ಬಗ್ಗೆ ಯೋಚಿಸಿದಂತೆಯೇ ಭಯದ ಭಾವ ಉದಿಸುತ್ತದೆ. ಅದರ ಕಾರಣ ಹುಡುಕುವುದು - ಆ ಕುರಿತು ಚರ್ಚಿಸುವುದು ಇಲ್ಲಿ ಉಚಿತವೆನಿಸದು.

ಸುಮಾರು ನಲುವತ್ತು ವರ್ಷಗಳಿಂದೀಚೆಗೆ ಅಂಬೇಮೂಲೆಯವರು ರಚಿಸಿದ ವಿಭಿನ್ನ ಯಕ್ಷಗಾನ ಪ್ರಸಂಗಗಳ ಜೊತೆಗೆ, ಬಿಡಿ ಬರಹಗಳು ಹಾಗೂ ಅಂಬೇಮೂಲೆಯವರ ಬಗ್ಗೆ ಅವರ ನಿಕಟವರ್ತಿಗಳು ಬರೆದ ಲೇಖನಗಳನ್ನು ಈ ಪುಸ್ತಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ಯಕ್ಷಗಾನ ಪ್ರಸಂಗಗಳನ್ನು ವಿಭಾಗಿಸಿಕೊಳ್ಳುವಲ್ಲಿ ನಮ್ಮ ಕೆಲವೇ ಮಿತ್ರರ ಸಮ್ಮಿಳಿತ ದೃಷ್ಟಿ ತೀರ್ಮಾನಿಸಿದ ದಾರಿಯೇ ನಮಗೆ ದಿಕ್ಸೂಚಿ. ಪೌರಾಣಿಕ, ಐತಿಹಾಸಿಕ, ಸಾಮಾಜಿಕಗಳೆಂಬ ಪರಿಗಣನೆಯೊಂದು, ಕನ್ನಡ - ಹವಿಗನ್ನಡ, ತುಳು - ಹೀಗೆ ಭಾಷಾಪರ ಪರಿಗಣನೆಯಿನ್ನೊಂದು.

ಪ್ರಸಂಗ ಕರ್ತರಾಗಿ, ವೇಷಧಾರಿಗಳಾಗಿ ಅರ್ಥಧಾರಿಗಳಾಗಿ, ಪ್ರವಚನಕಾರರಾಗಿ ಬಹುಮುಖ ಪ್ರತಿಭೆಯನ್ನು ಹೊಂದಿದವರು ಶ್ರೀ ಗೋವಿಂದ ಭಟ್ಟರು. ಜೊತೆಗೆ ಕೃಷಿ ಹಾಗೂ ವೈದ್ಯಕ. ಇವೆಲ್ಲವುಗಳ ಮಧ್ಯೆ ಇಂತಹ ವಿಪುಲ ಸಾಹಿತ್ಯ ಸೃಷ್ಟಿಯಾಯಿತು

ಎನ್ನುವಾಗ ಅಚ್ಚರಿ ಮೂಡುತ್ತದೆ. ಕೆಲವು ಬಿಡಿ ಬರಹಗಳು ಹಾಗೂ 'ರಾಜಹಂಸ ವಿಜಯ' ಮತ್ತು 'ಜಯ ವಿಜಯ' ಪ್ರಸಂಗಗಳನ್ನು ಬಿಟ್ಟರೆ ಉಳಿದೆಲ್ಲ ಕೃತಿಗಳೂ ಅಪ್ರಕಟಿತ. ಇದನ್ನು ಬೆಳಕಿಗೆ ತರುವ ಪ್ರಯತ್ನಕ್ಕಿಳಿದ ಸಮಿತಿಯವರ ಸಾಹಸ ದೊಡ್ಡದೇ. ಕಲಾ ಪ್ರೇಮಿಗಳು - ಸಾಹಿತ್ಯಾಭ್ಯಾಸಿಗಳು ಈ ಕೃತಿಯನ್ನು ಸಮರ್ಪಕವಾಗಿ ಬರಮಾಡಿಕೊಂಡಾಗಲೇ ಈ ಪ್ರಯತ್ನ ಫಲಪ್ರದವಾಗುತ್ತದೆ. ಹಾಗಾಗಲೆಂದು ಆಶಯ.

ಯಕ್ಷಗಾನ ಪ್ರಸಂಗ ರಚನೆ ಎಂಬುದು ಒಂದು ರೀತಿಯಲ್ಲಿ ಕ್ಲಿಷ್ಟಕರ ಕಾರ್ಯ. ರಾಗ - ತಾಳದ ಗತಿಯ ಜೊತೆಗೆ ಅದರ ಮೇಲಣ ಹಿಡಿತ ಅತ್ಯಗತ್ಯ. ಈ ಕೃತಿ ಸಂಪಾದನೆಯ ಕೆಲಸದಲ್ಲಿ ನನ್ನ ಪರಿಮಿತಿಗನುಗುಣವಾಗಿ ತೊಡಗಿಸಿಕೊಂಡಿದ್ದೇನೆ ಎಂದಷ್ಟೇ ಹೇಳಬಲ್ಲೆ. ಪದ್ಯಗಳ ನಡೆ - ರಾಗ - ತಾಳಗಳನ್ನು ಗಮನಿಸುತ್ತಾ ವರ್ಣಪಲ್ಲಟ - ಪದ ಬದಲಾವಣೆಯ ಕತ್ತರಿ ಪ್ರಯೋಗಕ್ಕೆ ಮುಂದಾಗುವುದು ನನಗೆ ಸರಿ ತೋರಲಿಲ್ಲ. ಅದಕ್ಕೆ ಮುಂದಾಗಲಿಲ್ಲ. ಕೃತಿಕರ್ತನ ಸ್ವಾತಂತ್ರ್ಯ - ಭಾವನೆ - ಮೂಲ ಆಶಯಕ್ಕೆ ಧಕ್ಕೆಯಾಗಬಾರದು ಎಂಬುದು ನನ್ನ ನಿಲುವು. ಸಂಪಾದಕನ ಹಸ್ತಕ್ಷೇಪ ಕೃತಿಕರ್ತನ ಅಧಿಕಾರ ಕಸಿಯುವಂತಾಗಬಾರದು. ಹೀಗಿದ್ದರೂ ಅಭಿಪ್ರಾಯ ವ್ಯತ್ಯಾಸ - ಸಂದೇಹಗಳು ಹುಟ್ಟಿಕೊಂಡಾಗ ಅಂಬೇಮೂಲೆಯವರನ್ನು ಸಂಪರ್ಕಿಸಿ, ಚರ್ಚಿಸಿ, ಪುಸ್ತಕದ ಒಟ್ಟಂದಕ್ಕಾಗಿ ಅವರಿಗೆ ತೊಂದರೆ ಕೊಟ್ಟಿದ್ದೇನೆ. ಅದನ್ನವರು ಸಹಿಸಿಕೊಂಡಿದ್ದಾರೆ. ಇಳಿವಯಸ್ಸಿನ ಅವರ ತಾಳ್ಮೆ - ಕಾಳಜಿ ನನಗೆ ಮುದ ನೀಡಿದೆ.

ಮಿತ್ರ ನಾ. ಕಾರಂತ ಪೆರಾಜೆ, ಬಿ. ಎನ್. ಮಹಾಲಿಂಗ ಭಟ್ಟ ಬಿಲ್ಲಂಪದವು ಇವರು ನನ್ನೀ ಕೆಲಸದಲ್ಲಿ ಸಮಾನ ಪಾಲುಗಾರರು. ಹಾಗಿದ್ದರೂ ಕಣ್ತಪ್ಪಿನಿಂದ ಕೃತಿಯಲ್ಲಿ ದೋಷಗಳು ಉಳಿದಿರಬಹುದಾದ ಸಾಧ್ಯತೆಯಿದೆ. ಮಹಾಜನರಲ್ಲಿ ಕ್ಷಮೆ ಯಾಚಿಸುವುದೊಂದೇ ನನಗಿರುವ ದಾರಿ. ಎಲ್ಲ ಬರಹಗಳನ್ನು, ಭಾವಚಿತ್ರಗಳನ್ನು ಒಟ್ಟು ಮಾಡುವಲ್ಲಿ, ವ್ಯವಸ್ಥೆಗೊಳಿಸುವಲ್ಲಿ ನೆರವಾದ ಅವರ ಚಿರಂಜೀವಿಗಳಿಗೆ ನಮ್ಮ ಋಣಭಾರ ಸಲ್ಲುತ್ತದೆ. ಅವಿರತ ಶ್ರಮ ವಿನಿಯೋಗಿಸಿ, ಆರ್ಥಿಕ ಸಂಪನ್ಮೂಲ ಸರಿದೂಗಿಸಿ, ಸಲಹೆ - ಸೂಚನೆಗಳನ್ನಿತ್ತು ಸಹಕರಿಸಿದ ಕೃತಿ ಪ್ರಕಾಶನ ಸಮಿತಿಯ ಸರ್ವ ಸದಸ್ಯರಿಗೂ ನನ್ನ ವಂದನೆಗಳು. ಸಂದೇಶ ನೀಡಿ ಅನುಗ್ರಹಿಸಿದ ಸಮಿತಿಯ

ಗೌರವಾಧ್ಯಕ್ಷರಾದ ಪರಮ ಪೂಜ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು, ಶ್ರೀ ರಾಮಚಂದ್ರಾಪುರಮಠ ಹೊಸನಗರ, ಶ್ರೀ ಎಡನೀರು ಮಠಾಧೀಶ ಪೂಜ್ಯ ಶ್ರೀ ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳು, ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ ಒಡಿಯೂರು ಇವರಿಗೆ ಸಾಷ್ಟಾಂಗ ಪ್ರಣಾಮಗಳು. ಶುಭ ಸಂದೇಶ ನೀಡಿದ ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಅವರಿಗೆ ಕೃತಜ್ಞತೆಗಳು. ಡಾ. ಅಂಬೇಮೂಲೆಯವರ ಕೌಟುಂಬಿಕ, ಸಾಹಿತ್ಯಕ, ಕಲಾವ್ಯವಸಾಯದ ವರ್ಚಸ್ಸಿನ ಹಿಂದೆ ಶ್ರೀ ಖಂಡಿಗೆ ರಾಮ ಭಟ್ಟರ ಔದಾರ್ಯದ ನೆರಳಿದೆ, ಉಪಕಾರದ ಹೊರೆಯಿದೆ. ಅವರು ಈ ಸಮಿತಿಯ ಹಿರಿತನ ವಹಿಸಿ ಎಲ್ಲರನ್ನು ಮುನ್ನಡೆಸುತ್ತಿರುವವರು. ಅವರ ವಾತ್ಸಲ್ಯ - ಹೃದಯವಂತಿಕೆಗೆ ಮಣಿಯುವುದು ನಮ್ಮ ಕರ್ತವ್ಯ. ನುಡಿ ತಿಲಕವಿರಿಸಿದ ಹಿರಿಯ ವಿದ್ವಾಂಸರಾದ ಪ್ರೊ. ಕೆ. ಸುಬ್ರಹ್ಮಣ್ಯ ಭಟ್ ರವರಿಗೆ ಅನಂತ ವಂದನೆಗಳು.

ಮುಖಚಿತ್ರದ ವಿನ್ಯಾಸ ಒದಗಿಸಿದ ಶ್ರೀ ಗಂಗಾಧರ ಬೆಳ್ಳಾರೆಯವರಿಗೆ ನಮನಗಳು. ಕೃತಿಯ ಮುದ್ರಣ ಕಾರ್ಯದಲ್ಲಿ ದುಡಿದ ವಿಟ್ಲ ಹನುಮಾನ್ ಪ್ರಿಂಟರ್ಸ್‌ನ ನೌಕರವರ್ಗ - ಮ್ಹಾಲಕರಿಗೆ ಕೃತಜ್ಞತೆಗಳು. ಕೃತಿ ಪ್ರಕಾಶನ ಸಮಿತಿಯ ಪದಾಧಿಕಾರಿಗಳಿಗೆ ಪ್ರತ್ಯಕ್ಷ - ಪರೋಕ್ಷ ಸಹಕಾರ ನೀಡಿ ಉಪಕರಿಸಿದ ಅಭಿಮಾನಿಗಳಿಗೆಲ್ಲ ಅಭಿವಾದನಗಳು.

- ಮುಳಿಯ ಶಂಕರ ಭಟ್ಟ
ಸಂಪಾದಕ

ಗುರು ವಂದನಂ - ೧

ಶ್ರೀ ಮಜ್ಜಗದ್ಗುರು ವರೇಣ್ಯರದ್ವೈತಮತ ।
ವೀ ಮಹಿಯೊಳರುಹೀರ್ದ ಶಂಕರಾಚಾರ್ಯರು ।
ದ್ಧಾಮ ಶಿಷ್ಯ ಸುರೇಶ ಯತಿವರ್ಯರಿಂದವಿಚ್ಛಿನ್ನಪಾರಂಪರ್ಯದೀ ।
ಭೂಮಿಯೊಳು ಪೆಸರ್ವಡೆದ ಗೋಕರ್ಣ ಮಂಡಲದ ।
ರಾಮಚಂದ್ರಾಪುರ ಮಠಾಧೀಶರಾಗಿರ್ದ ।
ರಾ ಮಹಾಗುರು ರಾಘವೇಂದ್ರ ಭಾರತಿಯವರ ಕರಕಮಲ ಜಾತರೆನಿಸಿ ॥ ೧ ॥

ವೇದ ವೇದಾಂಗ ನಿಗಮಾಗಮ ಪುರಾಣ ಶಾ ।
ಸ್ತ್ರಾದಿಗಳನರಿತು ಯತಿ ನಿಯಮವಂ ಪಾಲಿಸುತ ।
ಮೇದಿನಿಯ ಹವ್ಯಕಾವನಿಸುರರ್ಗುಚಿತ ಧರ್ಮಾಚಾರಸುವಿಚಾರವಾ ॥
ಬೋಧಿಸುತ ಸುಜ್ಞಾನವನ್ನ, ವಿದ್ಯಾರೋಗ್ಯ ।
ಗೋದಾನ ರಾಮೋತ್ಸವಾದಿಗಳ ನಡೆಸಿಯಾ ।
ರಾಧಿಸುತ ನಿಯಮದಲಿ ರಾಮಚಂದಿರ ಚಂದ್ರಮೌಳೀಶ್ವರರ ನಿರತವು ॥ ೨ ॥

ಧರಿಸಿ ಭಸ್ಮತ್ರಿಪುಂಡ್ರ ಕಂಠದೊಳ್ ಸ್ಫಟಿಕಮಣಿ ।
ಪರಮರುದ್ರಾಕ್ಷಿ ತುಲಸಿಯಹಾರ ಶೋಭಿಸು ।
ತ್ತಿರುವ ಕಾಷಾಯಾಂಬರವು ದಂಡ ಮೇಣ್‌ಕಮಂಡಲಗಳಿಂ ಗುರುಪೀಠದಿ ॥
ಹರಿಯಜಭವಾತ್ಮರಾಗಿಯೆ ದಿವ್ಯತೇಜದಿಂ ।
ಮೆರೆವ ಶ್ರೀ ರಾಘವೇಶ್ವರ ಭಾರತಿಯರ ಪದ ।
ಸರಸಿಜಕೆ ಮಣಿವೆ ಪಾಲಿಪುದೆಮ್ಮನೆಂದು ಶ್ರೀ ನಂದಿಕೇಶನ ನೆನೆವುತ ॥ ೩ ॥

ಗುರು ವಂದನಂ - ೨

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ ।
ರಾ ಮಹಾಶಂಕರರ ಶಿಷ್ಯ ತೋಟಕ ಯತಿಗ ।
ಳೀ ಮಹಿಯೊಳೆಡನೀರ ಕ್ಷೇತ್ರದೊಳ್ ಸ್ಥಾಪಿಸಿದ ಶ್ರೀ ಮಠದೊಳಂದಿನಿಂದ ॥
ನೇಮದೊಳಗಿದ್ದ ಗುರುವರ ಪರಂಪರೆಯೊಳು ।
ದ್ಧಾಮರಾ ಯೀಶ್ವರಾನಂದಯತಿವರರ ಕರ ।
ತಾಮರಸ ಸಂಜಾತ ಕೇಶವಾನಂದ ಭಾರತಿಯವರ ಪದಕೆ ಮಣಿವೇ ॥ ೧ ॥

ಹಣೆಗೆ ಭಸ್ಮ ತ್ರಿಪುಂಡ್ರ ವದನ ತೇಜೋಪುಂಜ ।
ವೆನಲು ಕಾಷಾಯಾಂಬರವನುಟ್ಟು ಕೊರಳಿಂಗೆ ।
ಮಿನುಗುತಿಹ ರುದ್ರಾಕ್ಷಿಹಾರಮಂ ಧರಿಸಿ ಕರದೊಳು ದಂಡವನ್ನು ಪಿಡಿದೂ ॥
ಜನತೆಗಾಶಾಸ್ತ್ರೋಕ್ತ ಧರ್ಮವಂ ಬೋಧಿಸುತ ।
ನೆನೆವುತಂತಃಕರಣದೊಳು ಭಾವ ಶುದ್ಧಿಯಿಂ ।
ಘನಮಹಿಮ ಶ್ರೀ ದಕ್ಷಿಣಾಮೂರ್ತಿ ಗೋಪಾಲಕೃಷ್ಣನಂ ಪೂಜಿಸುತಲೀ ॥ ೨ ॥

ಗಾನ ಸಾಹಿತ್ಯ ಹರಿಕಥೆಯು ನಾಟಕ ಯಕ್ಷ ।
ಗಾನಾದಿಗಳೊಳು ನೈಪುಣ್ಯಮಂ ಪಡೆವುತಭಿ ।
ಮಾನಿಗಳಪೇಕ್ಷೆಯೊಲ್ ಭಾಗವಹಿಸುತಲಿ ಜನಮೆಚ್ಚುಗೆಯನುಂ ಪಡೆವುತ ॥
ಕ್ಷೋಣಿಯೊಳು ಕಲೆ ಕಲಾವಿದರಿಂಗೆ ಪ್ರೋತ್ಸಾಹ ।
ತಾ ನೀಡಿ ಮಠದ ಪೆಸರೆಕ್ಷಗಾನದ ಮೇಳ ।
ಊನವಿಲ್ಲದೆ ನಡೆಸಿಬರುವ ತೆರಗೈದಿರುವ ಗುರುಗಳೇ ಧನ್ಯರೆನುವೆ ॥ ೩ ॥

ಭಾರತದಿ ಪೆಸರಾಂತ ಕುಮ್ಟ, ಮುಂಬಯಿ ಬೆಂಗ ।
ಳೂರಾದಿ ನಗರಂಗಳಿಂದಮಿತ ಜನ ಬಂದು ।
ಸೇರಿ ಶರಣೆಂದರಂ ಹರಸಿ ನಸುನಗೆಬೀರುತವರಭೀಷ್ಟದ ತೆರವಲೀ ॥
ಸಾರಿ ಸುವ್ರತ ಯಕ್ಷಗಾನ ಸಪ್ತಾಹಮು ।
ನ್ನೋರಂತೆ ಗೈದಾಕಲಾವಿದರ, ಮಾನಿಸುತ ।
ಭೂರಿತೇಜದಿ ಮೆರೆವ ಗುರುಗಳಿಂಗೊಂದಿಸುವೆ ನಂದಿಕೇಶನ ಧ್ಯಾನಿಸಿ ॥ ೪ ॥

ಗುರು ವಂದನಂ - ೩

ಶ್ರೀ ಮನೋಹರ ಮೂರ್ತಿ ರಾಮನ ।
ನಾಮ ಸುಧೆಯನು ಸವಿದು ಸೇವೆಯ ।
ತಾ ಮನದಿ ಬದಲೆಣಿಸದೆಯೆ ಸೇವಿಸಿದ ಪವನಜನ ॥
ಸ್ವಾಮಿದತ್ತಾತ್ರೇಯ ವಚ್ರಾಂ ।
ಬಾ ಮಹಾ ಮಾತೆಯರ ಪೂಜಿಸು ।
ತೀ ಮಹಿಯೊಳವಧೂತ ಗುರುವರರೆನಿಸಿ ನಿಷ್ಟೆಯಲೀ ॥ ೧ ॥

ತುರುಚೆಗಿಡ ಕಲುಮರಗಳಿಂದಾ ।
ಪರಿಸಿಕೊಂಡೀರ್ಪೆಡೆಯೊಳಾದುಂ ।
ಬರವು ನೆಲ್ಲಿಸುಪಾರಿಜಾತವು ಕಣ್ಗೆ ಗೋಚರಿಸೇ ॥
ದೊರೆತ ದತ್ತನಮೂರ್ತಿ ಹನುಮನ ।
ಕರುಣೆಯೊಳು ಸುಜ್ಞಾನವುದಿಸ ।
ಲ್ಕರಿತು ದಕ್ಷಿಣ ಗಾಣಗಾಪುರವೆನಿಪುದೆಂದೆಣಿಸೀ ॥ ೨ ॥

ಕೊರಕಲಿನ ಸ್ಥಳವಿದನು ಶುದ್ಧೀ ।
ಕರಿಸಿ ಗುಡಿಗೋಪುರವ ನಿರ್ಮಿಸಿ ।
ಮೆರೆಸಿ ಶರಣರ ಪೊರೆದು ಕೃಪೆಯೊಳು ದಾರಿಯಾಗುತಲೀ ॥
ನಿರತ ಒಡಿಯೂರಿನೊಳು ರಾಜಿಸು ।
ತಿರುವ ದೇವಾನಂದ ಗುರುಗಳಿ
ಗೆರಗುವೆನು ಶ್ರೀ ನಂದಿಕೇಶನ ನೆನೆದು ಭಕ್ತಿಯಲೀ ॥ ೩ ॥



ಗ್ರಾಮ ದೇವರು



ಪೂಜಾನಿರತ.....



ಶ್ರೀಮತಿ ಸುಶೀಲ - ಗೋವಿಂದ ಭಟ್


ವಂಶವಲ್ಲರಿ



ಸಂತೃಪ್ತ ಸಂಸಾರ



ಪ್ರವಚನ




ಅರ್ಥಗಾರಿಕೆ



ಎಡನೀರು ಶ್ರೀಗಳಿಂದ ಸಂಮಾನ




ರಾಘವೇಶ್ವರ ಶ್ರೀಗಳಿಂದ ಸಂಮಾನ



ಸಾಧನೆಗೆ ಸಂದ ಗೌರವ


ತೆಕ್ಕೆಕೆರೆ ರಾಮ ಭಟ್ (ತಂದೆ)



ಸಾವಿತ್ರಿ (ತಾಯಿ)



ಅಂಬೇಮೂಲೆ ಕೃಷ್ಣ ಭಟ್ (ಅಣ್ಣ)



ವಲ್ಲರಿ ಹಬ್ಬಿದಾಗ

ಯಕ್ಷವಲ್ಲರಿ

ಅಕ್ಷರ ವಿಜಯ

॥ ವಾರ್ಧಿಕ ॥

ಶ್ರೀ ಮಹಾದೇವ ಗುರು ಗಣಪ ಸಿರಿ ವಾಣಿ ಸು । ತ್ರಾಮ ಗುಹ ಹನುಮಂತ ತಪನಾದಿಗ್ರಹರನು । ದ್ಧಾಮ ಕವಿ ಬುಧರನುಂ ಮುಂಡೋಢ್ರ ವಿಷ್ಣ್ವಾಂಬ ಶಾಸ್ತ್ರಾರರಂ ನೆನೆವುತಾ ॥ ಭೂಮಿಯೊಳವಿದ್ಯಾಂಧತೆಯಲಿ ಬಳಲುವ ಜನ । ಸ್ತೋಮಕಂ ಸಾಕ್ಷರತೆ ಜ್ಯೋತಿ ಬೆಳಗಿದ ಕಥೆಯ । ನಾ ಮುದದೊಳೊರೆವೆ "ನಕ್ಷರ ವಿಜಯ" ಪೆಸರಿನಿಂದೆ ಕ್ಷಗಾನದೊಳಿದರನೂ ॥ ೧ ॥

॥ ರಾಗ ಭೈರವಿ ಝಂಪೆ ತಾಳ ॥

ಸುರಪಾಲನೊಂದು ದಿನ । ಭರಿತ ತೋಷದಿ ತನ್ನ । ವರೋಳೆಂದ ಸುಖಿಗಳಾ ವಿಂದೂ ॥ ವೈರಿಗಳು ಬರೆ ಮುಂದೆ । ಪರಿಹಾರವೇನೆನಲ್ಕರುಹಿದರು ಪೌರುಷವ ನಂದೂ ॥ ೧ ॥

॥ ರಾಗ ಮಾರವಿ ಏಕತಾಳ ॥

ಬಿಡು ದುಗುಡವ ಖಳ । ಗಡಣಕೆ ಬೆದರೆವು । ಕೆಡಹುತ ರಿಪುಗಳನೂ ॥ ಪಡೆವೆವು ಜಯವನು । ದೃಢವೆಲೆ ಮಘವನೆ । ಬಿಡು ನೀ ಯೋಚನೆಯಾ ॥ ೧ ॥

॥ ರಾಗ ಕೇದಾರಗೌಳ ಅಷ್ಟತಾಳ ॥

ಹರಿನಾರಾಯಣಧ್ಯಾನ । ವಿರಚಿಸಿ ಬಹ ಮುನಿ । ವರನ ಕಂಡುಪಚರಿಸೇ ॥ ಹರುಷದಿ ಕೇಳ್ದನು । ಸಿರಿ ವಿದ್ಯೆಯೆರಡರೊ । ಳರುಹಧಿಕವದಾವುದು ॥ ೧ ॥ ವಿದ್ಯೆಯಿಂ ಧನವೆತಾ । ನೆದ್ದು ತೋರುವುದು ಪ್ರ । ಸಿದ್ಧವಾಗಿದೆ ಲೋಕದೀ ॥ ಹೊದ್ದಲೇಕನುಮಾನ ಬದ್ಧವೆಂದೆನೆ ವಾಣಿ । ಯಿದ್ದೆಡೆ ಸುರ ಮುನಿ ಪೋಗೀ ॥ ೨ ॥ ॥ ೫ ॥

॥ ರಾಗ ಸುರುಟಿ ಏಕತಾಳ ॥

ವಂದಿಪೆನೆಲೆ ಮಾತೇ । ಬಂದುದ । ನೆಂದಪೆ ಕೇಳ್ ಖ್ಯಾತೇ ॥ ಯಿಂದಾ ಸುರಪನು । ನಿಂದಿಸಿದನು ನಿನ । ಗಿಂದಲಧಿಕ ಸಿರಿ । ಯೆಂದಾ ಸಭೆಯೊಳು ॥ ೧ ॥

|| ರಾಗ ನವರೋಜು ಏಕತಾಳ ||

ಇದಕೆ ಯೋಚಿಸಬೇಡಾ । ನಾ । ವಿಧಿಸುವೆ ಶಿಕ್ಷೆಯ ನೋಡಾ ॥ ಮದಮುಖ ನಂದದಿ । ವದರಿದ ಶಕ್ರನ । ಮುದದಿಂ ತಿದ್ದುವ । ಹದನ ನಿರೀಕ್ಷಿಸು ॥ ೧ ॥

|| ಕಂದ ಪದ್ಯ ||

ಹಿತದಿಂ ನಾರದನಂ ಕಳು । ಹುತ ಪತಿಯೊಡ ನೀ ಹದನವನುಸುರಲ್ಕಾಗಂ ॥ ಖತಿಯಿಂದುರುಳದ್ವಯರಂ । ಕ್ಷಿತಿಯೊಳು ಪುಟ್ಟಿಸಲವರತಿ ಭೋರ್ಗರೆದೆಂದರ್ ॥೧॥

|| ರಾಗ ಸೌರಾಷ್ಟ್ರ ತ್ರಿವುಡೆ ತಾಳ ||

ಲೋಕ ಮೂರನು ಗೆಲುವ ವರವ ಪಿ । ನಾಕ ಧರನಿಂ ಪಡೆದೆ ವಿನ್ನಾ । ನಾಕದವರನು ಗೆಲುವಡಭಿಮತ । ನೀ ಕೊಡೆಲವೊ ॥ ೧ ॥ ಅಣ್ಣ ಜಾಡ್ಯನೆ ಕೇಳು ಧುರಕೆ ಮು । ಕ್ಕಣ್ಣ ಬರಲಂಜುವೆನೆ ಸಾಸಿರ । ಗಣ್ಣ ಗಣ್ಯನೆ ಯೆನುತ ತೆರಳ್ಯವ । ರನ್ನು ಕೆಣಕೇ ॥ ೨ ॥

|| ರಾಗ ಮುಖಾರಿ ಏಕತಾಳ ||

ಅನಿಮಿಷರೊಡೆಯ ಲಾಲಿಸಯ್ಯ । ಸಟೆಯಲ್ಲವು ಜೀಯ । ದನುಜರಟ್ಟುಳಿ ಬಲವಾಯ್ತಯ್ಯ ॥ ಬಣಗು ಜಾಡ್ಯನು ಮೇ । ಣನುಜ ಮೌಢ್ಯನು ಸಹ । ಘನ ಪೌರುಷದಿಂ ಕೆಣಕಿ ಮುಂಬರುವರು ॥ ೧ ॥ ॥ ೧೧ ॥

|| ರಾಗ ಭೈರವಿ ಅಷ್ಟತಾಳ ||

ಕೇಳುತ್ತ ಶಕ್ರನಂದೂ । ಕೋಪದಿ ಸುರ । ಜಾಲದಿಂ ತಡೆಯೆ ಬಂದೂ ॥ ಮೆಲ್ಲಾಯ್ದು ಬರುತಿಹ । ಖೂಳನ ತಡೆದಗ್ನಿ । ಕೇಳಲಾ ಖಳನೆಂದನೂ ॥ ೧ ॥ ಪೆಸರು ಕೇಳೆಲೊ ಮೌಢ್ಯನೂ । ಸಂಗ್ರಾಮದೊ । ಳಸಮ ಸಾಹಸಿಯು ತಾನೂ ॥ ಮಿಸುಕಲು ಬಿಡೆನೆಂದು । ಯೆಸೆಯೆ ಕಣೆಯ ಹೂಂಕ । ರಿಸುತ್ತ ಮಘವನೆಂದಾ ॥ ೨ ॥

|| ರಾಗ ಶಂಕರಾಭರಣ ಮಟ್ಟೆತಾಳ ||

ಆರೊ ನೀನೀ ನಾಡೊಳಿಂದು । ಭಾರಿ ಹಾನಿಗೈವ ಖೂಳ । ಸಾರು ಪಿಂತೆ । ಸಾಯ ದೂರ ಸೇರಿ ಬದುಕೆಲಾ ॥ ೧ ॥ ಜಾಡ್ಯ ತಮಪುರಾಧಿಪತಿ ಬ । ಲಾಢ್ಯ ನೆನ್ನ ಕೆಣಕಿ ಕೆಡದಿ। ರಡ್ಡ ಬಿದ್ದು ಶರಣೆನೆಲೊ ಗು । ಣಾಢ್ಯನೆನಿಸಿಯೇ ॥ ೨ ॥ ಶರಣು ಬರುವದುಂಟೆ ನಿನ್ನ। ತರಿವೆನೆನುತ ಲೆಚ್ಚಡದನು । ಪರಿಹರಿಸಿಯೆ ಖೂಳನೆಲ್ಲ ಸುರರ । ಜಯಿಸುತಾ ॥ ಭರದಿನಾಕ ಪೀಠವೇರಿ । ಮೆರೆಯಲಿತ್ತಲವನಿಯೊಳಗೆ । ನರರು ಪಶುಗಳಂತೆ ವಿದ್ಯೆ । ಮರೆತು ತೊಳಲಲೂ ॥ ೪ ॥

|| ಭಾಮಿನಿ ||

ಧರೆಯ ದುಸ್ಥಿತಿಗಾಗಿ ಸುರಪನು । ಮರುಗುತಲಿ ನಾರದಗೆ ತಿಳುಹಲು । ತೆರಳಿದರು ಹರಿಗುಸುರೆ ಕ್ಷೀರಾಂಬುಧಿಯ ಪುರವರಕೇ || ಶರಣ ಜನ ಜಯವೆನಲು ಸಿರಿಯಿಂ । ಚರಣ ಸೇವೆಯಗೊಂಡು ಕರುಣಾ । ಕರನಿರಲ್ಕಡಿಗೆರಗಿ ಬಿನ್ನೈಸಿದರುಯಿಂತೆನುತಾ ||೧||

|| ರಾಗ ಸುರುಟಿ ಏಕತಾಳ ||

ಪಾಲಿಸು ಕಮಲಾಕ್ಷ । ನಮ್ಮನು । ಲೀಲೆಯಿಂ ಖಳ ಶಿಕ್ಷ || ಪೇಳುವದೇನಾ । ಖೂಳರು ನಾಕವ । ಕೋಳು ಗೊಳ್ಳುತ ಜನ । ಜಾಲವ ಕೆಣಕ್ಕರು || ೧ || ವಿದ್ಯೆ ತೊರೆದು ನರರೂ । ಮೌಢ್ಯವ । ಹೊದ್ದುತಲೆವುತಿಹರೂ || ಶುದ್ಧ ಕರ್ಮವನುಳಿ । ದೆದ್ದು ಹಂಕಾರದೊ । ಳಿದ್ದ ಪರಿದನೀ । ತಿದ್ದ್ಯುಳುಹೆಮ್ಮನು || ೨ || || ೨೦ ||

|| ರಾಗ ನಾದನಾಮ ಕ್ರಿಯೆ ಅಷ್ಟತಾಳ ||

ವೃಂದಾರಕಾದ್ಯರು ಏಳಿರೀ । ವಾಣಿ । ಗಂದು ತಾತ್ಸಾರವಗೈದಿರೀ || ಬಂದುದೀ ಕಷ್ಟಗಳದರಿಂದಾ । ಹೋಗಿ । ವಂದಿಸಿ ಕ್ಷಮೆ ಕೇಳ್ದಡಾನಂದ || ೧ || ಭರತ ಭೂಮಿಯ ಮ್ಲೇಂಛರಿಂದಲೀ । ಧರ್ಮ । ಪುರುಷನೋಲ್ ಗಾಂಧಿ ಸತ್ಪಥದಲೀ || ಸೆರೆ ಬಿಡಿಸಿದ ನದನೆಣಿಸದೇ । ಸ್ವಾರ್ಥ । ಪರರಧಿಕಾರಕ್ಕೆ ಪಾಯ್ವುದೇ || ೨ || ಪ್ರಾಂತ ದೇಶವು ಜಿಲ್ಲೆ ತಾಲೂಕು । ಗ್ರಾಮ । ವಿಂತು ಬೇರ್ಪಡಿಸ್ಯಧಿಕಾರವೂ || ನಿಂತು ನೀವಾತನು ತೋರಿದಾ । ಪಥ । ವಂ ತುಳಿವುತಸಾಗೆ ಜಯಪ್ರದ || ೨ || ಬಡವ ಬಲ್ಲಿದ ಜಾತಿ ಭೇದವಾ । ಬಿಟ್ಟು ಕೊಡಿ ರೆಲ್ಲರಿಗೆ ವಿದ್ಯಾಭ್ಯಾಸವಾ || ಪಡೆಯೆ ಜ್ಞಾನವ ನಿಮ್ಮ ಕಷ್ಟವೂ । ನೀಗಿ । ಪಡೆವಿರಿಸುಖವೆಂದು ಕಳುಹಲೂ || ೩ || || ೨೩ ||

|| ಕಂದ ಪದ್ಯ ||

ಹರಿಯಾಜ್ಞೆಯ ತೆರನದನುಂ । ವಿರಚಿಸುತೆಲ್ಲವನುಯಿರಲವನಿಯೊಳುಯಿತ್ತಲ್|| ಹರುಷದಿ ಜಿಲ್ಲಾಧಿಪಕರೆ । ದರುಹಿದನಧಿಕಾರಿಗಳೊಡನಿಂತೆನುತಾಗಲ್ || ೧ ||

|| ರಾಗ ಸೌರಾಷ್ಟ್ರ ತ್ರಿವುಡೆ ತಾಳ ||

ಹಿಂದುಳಿದವರ ಮುಂದೆ ತರುತಲಿ । ಹಿಂದು ವೊಂದೇ ಮತದಿ ವಿದ್ಯೆಯ । ಚಂದದಿಂ ಬೋಧಿಸುವುದೊಲ್ಲದ । ರೆಂದು ಬಿಡದೇ || ೧ || ವೃದ್ಧ, ಬಾಲಕರೆನದೆ ಮನೆಯೊಳ । ಗಿದ್ದವರಿ ಗಕ್ಷರದ ಜ್ಞಾನವ । ಹೊದ್ದಿಸುವದೆನಲೊಪ್ಪುತೈದಲು ಬದ್ಧರಾಗೀ || ೨ ||

॥ ರಾಗ ಕಾಂಬೋಧಿ ಝಂಪೆ ತಾಳ ॥

ಇತ್ತಲರ್ಕಾಂಜಿ ಗುತ್ತಿನ ಪೂಂಜ ಬಡವರಿಂ । ದೊತ್ತಿಸುತ ಹೆಚ್ಚೆರಳ ಗುರುತಾ॥ ಕೃತ್ರಿಮದಿ ಬಹಳ ಸಂ । ಪತ್ತನಾರ್ಜಿಸಿ ಮೆರೆದು । ಬಿತ್ತರಿಸುತೀರ್ದನಿಂತೆನುತಾ ॥ ೧ ॥ ಭಟ್ರೆ, ಸೆಟ್ರೆಲ ಕುಟ್ಟಿ । ಚೆಟ್ಟಿ ಚೆಟ್ಟ್ಯಾರ್ ಕೇಣಿ । ವೊಟ್ಟಾದ್ ನಂಕೊಂಜಿ ಸಂಕೊ ॥ ಕಟ್ಟವೊಡುನಿಕ್ಕೆಹೆ । ಬ್ಬೆಟ್ಟ್ ಬೋಡ್ಯೆಕ್ಕಿತ್ತೆ । ಗುಟ್ಟುಟೇ ಕೊರ್ಲೆ ಪಣ್ಣಾಗ ॥ ೨ ॥ ಉದ್ದೊಕಾರ್‌ತೀಜಾರ್ । ತಿದ್ದಿ ಟರೆಲಿನ್ ತಂಗಿ । ಕುದ್ಯ ಮೀಸೆತ ಜವನೆ ಬತ್ತ್ ॥ ಸದ್ದ್ ಯಿದ್ಯಾಂತೆದ್‌ರ್ । ಕೊರ್ದ್ ಗೌರವೊ ಟಿಪ್ನ । ಮುದ್ದಣ್ಣೆ ಮಗ ಟಿಂಚಪಣ್ಪೇ ॥ ೨ ॥ ಒಂಚಿ ಪಿದಡಿಯ ಬಾಲೆ । ವಂಚನೆನ್ ಬುಡ್ತು ಪಣ್। ಯಿಂಚತಿರ್ಗ್ಂಡ ಗುಣೊ ದಾನೆ ॥ ಪಂಚಯತ್ ತಕುಳು ಕೊರಿ । ಸಂಚಿನ್‌ಲ ಪತ್ತೊಂಡ । ಸಂಚಾರೊಟಾವೊ ಕಾಸ್ಪಣ್ಣಾ ॥ ೩ ॥ ॥ ೨೯॥

॥ ರಾಗ ಸೌರಾಷ್ಟ್ರ ತ್ರಿವುಡೆ ತಾಳ ॥

ಕಾಸ್‌ಗಾತೇ ಜೀವೊ ನಮ್ಮರೆ ? । ಕ್ಲೇಶೊ ಬುಡಿ ಸರಕಾರೊ ಅಕ್ಷರ । ಭ್ಯಾಸೊ ಕೆಂಕ್ಕೆಗ್‌ಕೊರ್ತ್ತರಾಜ್ಜೆನ್ । ಯೀಸಮಯೊಟು ॥ ೧ ॥ ಹಳ್ಳಿ ಹಳ್ಳಿದ ಯಿಲ್ಲಡಿಲ್ಲಡೆ । ಟುಳ್ಳ ಜೋಕ್ಲೆಗ್ ಪರಬೆರೆಗ್‌ಲಾ । ವುಲ್ಲಸೊಡು ಕಲ್ಪಾವೊ ಯೀರೆನ । ಗುಲ್ಲು ಬೋಡ್ಜಿ ॥ ೨ ॥

॥ ಕಂದ ಪದ್ಯ ॥

ಈ ತೆರ ಪಿತನಿಗೆ ತಿಳುಹುತ । ಲಾತನು ಬರೆ ಪಥದಿ ಮಮ್ಮದೆಯ ಗೃಹದೊಳಗಂ ॥ ಪ್ರೀತಿಲಿ ಮೂಸೆಯು ವಂದಿಸಿ । ತಾತನೊಳರುಹಿದ ಕಲಿವಭಿಲಾಷೆಯ ನಾಗಲ್ ॥ ೧ ॥ ॥ ೩೨ ॥

॥ ರಾಗ ಸಾಂಗತ್ಯ ರೂಪಕ ತಾಳ ॥

ಕೇಕ್ಕುಪ್ಪ ಪಡಿಕ್ಕಾನಿ । ನೋಕಿಪ್ಪೊ ಸೌಗರ್ಯ । ಮಾಕಿ ನಮ್ಮುಡೆ ಗವರ್ಮೆಂಡ್॥ ನೀಕಡ್ಡಿ ಸಿಲ್ಲೇಟ್ । ಪಾಕ್ ಪೆನ್ಸಿಲ್ ವಾಜಾಂ । ನೀಕಾಸ್‌ತಾ ವುಪ್ಪ ಯೆನಿಕ್ಕ್ ॥ ೧ ॥

॥ ರಾಗ ಕಾಂಬೋಧಿ ಝಂಪೆ ತಾಳ ॥

ಮೂಸೆ ಕೇಕ್‌ರ ಮೋನೆ । ಯೀಸ್ಲೇಟ್ ಕಡ್ಡಿ ಕಡ । ಲಾಸಜ್ ಚಾಡ್ ಮೀಂ ಪೊರ್ಕ್ ॥ ಕಾಸಾವು ಬಣ್ಣೆ ಯಿ ಬಿ । ಲೀಸ್ ಬಿಡ್ ಞಾನೆತ್ರ । ಕಾಸಾಕಿ ನೋಕಲ್ಲ ಕೊಡ್ತೆ ॥ ೧ ॥

|| ಭಾಮಿನಿ ||

ಪರಿಕಿಸುತ ನಗುತೆಂದ ಮುದ್ದಣ | ಬರೆವುತೋದಲು ಕಲಿತು ಸಹಿಯನು | ವಿರಚಿಸದ ಡಾತನಿಗೆ ದೊರಕದು ಯಾವ ಸವಲತ್ತೂ || ಅರಿತು ಕೊಳ್ಳದರಿಂದ ನಮ್ಮೆಡೆ | ಬರುತ ವೃದ್ಧರ ಶಾಲೆಯೊಳು ನೀ | ಬರಹವನು ಕಲಿಯೆಂದು ತೆರಳಲ್ಕಿತ್ತ ವೃದ್ಧೆಯಳೂ || ೧ ||

|| ರಾಗ ಕೇದಾರಗೌಳ ಝಂಪೆ ತಾಳ ||

ಪೆಣ್ಣೆ ನೀ ಯೆವಿಡೆ ಪೋಯೀ | ಕೊಂಡುವಾ | ಕಣ್ಣಾಡ ವೆಚ್ಚೆದಾಯೀ || ಕುನ್ನಿಂಡೆ ಪೋಲೆ ಕಲ್ಲ್ | ವೆಲಿ ವೆಲಿದ್ | ಯೆನ್ನಾಣ್ ಕಾಣ್ಣದುಳ್ಳೂ || ೧ || ವೆಳ್ಳಮ್ಮೆ ನಿಜಳ್ಕೆಯುತ್ತ್| ಅರಿಯಾದೆ | ವಲ್ಲದ್ಂ ಕಾಣುವಗತ್ತ್ || ನಲ್ಲವಣ್ಣಂ ಪಡಿಕ್ಕುಗಾ | ವೊಪ್ಪೆವುದಿ | ಯೆಲ್ಲ ನಿಜಳ್ ವಾಯ್ಯುಗಾ || ೨ ||

|| ರಾಗ ಆರ್ಯಸವ್ಯೆ ಏಕತಾಳ ||

ಇತ್ತಲು ಪಂಚಾಯತ್ ಪ್ರೆಸಿಡೆಂಟರು | ವುತ್ತಮ ಸಭೆಯನು ಕರೆವುತಲೀ || ಒತ್ತಿಲಿ ಗ್ರಾಮಧಿ | ಪತ್ಯರು ಸಹ ಕೂ | ಡುತ್ತಲಿಗೈದರು ಭಾಷಣವಾ || ೧ || || ೩೮ ||

|| ರಾಗ ಬೇಗಡೆ ಅಷ್ಟತಾಳ ||

ನಾಡ ಜನರೆಲ್ಲವರು ನೀವ್ ಕೇಳೀ | ನಾವೆಂಬ ನುಡಿಗಿದಿ | ರಾಡ ದಾತೆರ ನೆಸಗಿ ಹಳ್ಳಿಯಲೀ || ಮಾಡಿ ಪಂಗಡ ಮನೆ ಮನೆಗಳಲಿ | ನೋಡಿಯಕ್ಷರ ಜ್ಞಾನವಿರದರ | ಕೂಡಿ ಕರೆದೊಂದೆಡೆಯೊಳವರಿಗೆ | ನೀಡಿ ಪರಿಕರ ಸಹಿತ ವಿದ್ಯೆಯ || ೧ || ಸಹಿಯೆಸಗದರಿಗಿಲ್ಲ ಮತದಾನ | ಪಡಿತರದ ಚೀಟಿಗೆ | ವಿಹಿತವೆಂಬುದ ನರುಹಿ ಸುಜ್ಞಾನ || ಅಹಿತರನು ಮನವೊಲಿಸಿ ವೃದ್ಧರ | ಗೃಹದೊಳವರಿಗೆ ಕಲಿಸಿ ದೃಷ್ಟಿ ವಿ | ರಹಿತರಿಗೆ ವುಪನಯನ ನೀಡುತ | ಸಹಕರಿವುದೆನಲೊಪ್ಪುತೆಲ್ಲರು || ೨ ||

|| ರಾಗ ಕೇದಾರ ಗೌಳ ಝಂಪೆ ತಾಳ ||

ಅಲ್ಲಲ್ಲಿ ಕೇಂದ್ರ ರಚಿಸೀ | ನಿರಕ್ಷರರ | ಮೆಲ್ಲನಲ್ಲಿಗೆ ಕರೆಯಿಸೀ | ಉಲ್ಲಾಸದಿಂ ಬರೆಯಲೂ | ವೋದಲಿಕು | ಯೆಲ್ಲರಿಗು ಪೇಳ್ವಾಗಲೂ || ೧ ||

|| ರಾಗ ನಾದನಾಮ ಕ್ರಿಯೆ ಅಷ್ಟತಾಳ ||

ಹರಿಶ್ರೀಯೆನ್ನೆವುದುಂ ವೆಲ್ಯಚ್ಚ | ಯೆನಿಕ್ | ಅರಿಯೇಲ್ಲಾ ಮೋನೆ ನೀ ಕಾಣೆಚ್ಚ || ಶೆರಿ ನೋಕುಂ ಯಿಜನ್ನಾರಂಭಿಕ್ಕುಂ | ಮೇಲೆ | ಬರೆಚ್ಚದು ಪೋಲ್ಕನ್ನೆ

ವಾಯಿಕ್ಕುಂ ॥ ೧ ॥ ಅಜ್ಜಿ ಅ ಆ ಯೆಂದ್ ಬರೆಯಿಲೇ । ಯಿಂದಾ । ಪಿಜ್ಜಿ ಯೀರ್ ಬರೆಪ್ಪಾತ್ ತೋಜಾಲೇ ॥ ಸಜ್ಜಾತ್ ಕೈಪತ್ತ್ ಬರೆ ಪ್ಪಾಪೆ । ಬೇಜಾ । ರಿಜ್ಜತ್ತೊ ಯಿಂಚಾನೆ ಓದ್ಪಾಪೆ ॥ ೨ ॥

॥ ರಾಗ ಸೌರಾಷ್ಟ್ರ ತ್ರಿವುಡೆ ತಾಳ ॥

ಮೇಲು ಪಂಜ್ತಿಯ ಹಾಕಿ ಕೊಡುವೆ ಸು । ಶೀಲರಿದರನು ನೋಡಿ ಬರೆಯಿರಿ । ವರೆವೆನಕ್ಷರ ಮಾಲೆ ಕಲಿತಾ । ಮೇಲೆ ಓದೀ ॥ ೧ ॥ "ಆ " ಲಿಪಿಗೆ "ನೆ" ಯು ಸೇರಲಾನೆಯು। ಶಾಲೆ ಬಿಡಿಸಲ್ಕಕ್ಷರದ್ವಯ । ವೋಲ್ಯೆಸೆ ಲಿಪಿ ಶಬ್ದ ಪದಗಳ । ಜಾಲವಾಕ್ಯ ॥ ೨ ॥ ವಿದ್ಯೆ ಮನುಜಗೆ ಸಕಲ ಭಾಗ್ಯವು । ವಿದ್ಯೆ ಜ್ಞಾನಕೆ ಮೂಲ ಬಂಧುವು । ವಿದ್ಯೆಯಿರದವ ಪಶು ಸಮನುಯಿದು । ಯಿದ್ದ ಸತ್ಯ ॥ ೩ ॥

॥ ರಾಗ ನಾದನಾಮ ಕ್ರಿಯೆ ಅಷ್ಟತಾಳ ॥

ಹಳಬರೆಳೆಯರೆಂಬ ಭೇದವಾ । ಬಿಟ್ಟು । ಕಳೆವುತ್ತ ಜಾತೀಯ ವಾದವಾ ॥ ಕಲಿತು ಸಾಕ್ಷರತೆಯಿಂ ಮೆರೆದರೂ । ಕೇ । ರಳ ವಿದ್ಯಾಂಬುಧಿಯೆಂದು ಪೊಗಳ್ದರೂ ॥ ೧ ॥

॥ ವಾರ್ಧಿಕ ॥

ಭಾರತಾವನಿಯೊಳೀತೆರನಕ್ಷರ ಜ್ಞಾನ । ಸೇರಲೆಲ್ಲರಿಗತ್ತ ಜಾಢ್ಯ ಮೌಢ್ಯಾದಿ ಖಳ । ರಾರುಭಟೆ ಹಿಂಗಲಿದನರಿತು ಸುರಪಾದಿಗಳು ಖೂಳರಂ ಮರ್ಧಿಸುತಲೀ ॥ ಚಾರು ಭಕ್ತಿಯೊಳು ಹರಿಯಜ ಭವರ ಸಿರಿ ದೇವಿ । ಶಾರದೆಯರಂ ನುತಿಸಿ ಭೂರಿ ವಿಭವದಿ ಪೀಠ । ವೇರಲಮರಾಧಿಪನಿಗಾರತಿಯ ಬೆಳಗೆ ಸಂತೋಷ ಗೊಂಡರು ಸರ್ವರೂ ॥ ೧ ॥

॥ ರಾಗ ಸೌರಾಷ್ಟ್ರ ತ್ರಿವುಡೆ ತಾಳ ॥

ಇಂತು "ಅಕ್ಷರ ವಿಜಯ" ಕೃತಿ ನಲ । ವಾಂತು ಶಾರದೆ ನುಡಿಸಿದಂದದಿ । ಕಂತು ಹರನನು ನೆನೆದು ರಚಿಸಿದೆ । ಸಂತಸದಲೀ ॥ ೧ ॥ ಜಾತಿ, ಕೃತಿ, ಯಧಿಕಾರ, ಭಾಷೆಗೆ । ಖಾತಿ ಗೊಳದಿದರೊಳಗೆ ತೋರುವ । ರೀತಿ ನೀತಿಯ ನಾಯ್ದು ಮೆರೆಸಲು । ಪ್ರಾರ್ಥಿಸುವೆನೂ ॥ ೨ ॥

॥ ವಾರ್ಧಿಕ ॥

ಕೇರಳ ಪ್ರಾಂತ ಕಾಸರಗೋಡು ತಾಲೂಕು । ಕಾರಡಕ ಕ್ಷೇತ್ರ ಅಂಬೇಮೂಲೆ ಪುರವಾಸ । ಧಾರಿಣೇಸುರ ಕವಿಕುಲಜ ಗೋತ್ರ ಹವ್ಯಕ ಕಡೆಂಗೋಡ್ಲು ರಾಮಾತ್ಮಜಾ ॥ ಚಾರು ಭೈಷಜ್ಞ ಗೋವಿಂದ ನೀ ಕೃತಿ ಬರೆದು । ತೋರುವಬ್ದ ಪ್ರಜಾಪತಿ

ಪುಷ್ಯಸಿತ ಬಿದಿಗೆ । ವಾರ ಭೌಮದಿ ಮಂಗಲವಗೈದೆ ಶ್ರೀ ನಂದಿಕೇಶ್ವರನ ಕರುಣೆಯಿಂದಾ ॥ ೧ ॥

ಮಂಗಲ ಗಾನ

॥ ರಾಗ ಆಹೇರಿ ಝಂಪೆ ತಾಳ ॥

ಶ್ರೀ ಮಹಾದೇವನಿಗೆ । ಹೈಮಾವತೀ ಪ್ರಿಯಗೆ । ಸೋಮ ಕಮಲಾಪ್ತ ಪಾವಕನೇತ್ರಗೇ ॥ ತಾಮರಸಭವ, ಸುರಪ, ಸಿದ್ಧಾದಿ ಸನ್ನುತಗೆ । ಸ್ವಾಮಿ ಮಹಲಿಂಗೇಶನಿಗೆ ರುದ್ರಗೇ ॥ ಜಯ ಮಂಗಲಂ । ನಿತ್ಯ । ಶುಭ ಮಂಗಲಂ ॥ ೧ ॥ ಸಾಮಜಾನನ ಗುಹರನೊಡಗೂಡಿ ಸತಿಯುಮೆಗೆ । ವಾಮಾಂಕವಿತ್ತಲಂಕೃತ ನಿಂದು ಧರಗೇ ॥ ಆ ಮಹಾ ಪರಶ್ವಭಯ ಮೃಗ ವರದ ಹಸ್ತದಿಂ । ಹೇಮ ಸಿಂಹಾಸನದಿ ಮೆರೆವ ಭವಗೇ ॥ ಜಯ ಮಂಗಲಂ ॥ ನಿತ್ಯ । ಶುಭ ಮಂಗಲಂ ॥ ೨ ॥ ತರಣಿ ಶತ ತೇಜನಿಗೆ ದುರಿತ ಸಂಹಾರನಿಗೆ । ಗರಳಗಳ ಕಾಲ ಕಾಲಕೆ ಭರ್ಗಗೇ ॥ ಹರಿ ಪ್ರೀತ ಹರಿ ಭೂಷ ವಿಶ್ವೇಶ ಶರ್ವ ಮಮ । ಗುರು ನಂದಿಕೇಶ್ವರಗೆ ಶ್ರೀ ಶಿವನಿಗೇ ॥ ಜಯ ಮಂಗಲಂ । ನಿತ್ಯ । ಶುಭ ಮಂಗಲಂ ॥ ೩ ॥

॥ ಶುಭಂ ॥

ಪಾತ್ರಗಳ ವಿವರ

1. ಶ್ರೀ ಮಹಾವಿಷ್ಣು
2. ಶಾರದೆ
3. ನಾರದ
4. ದೇವೇಂದ್ರ
5. ಅಗ್ನಿ (ದೇವೇಂದ್ರನ ಬಲ)
6. ಜಾಡ್ಯಾಸುರ
7. ಮೌಢ್ಯಾಸುರ
8. ದೇವೇಂದ್ರನ ದೂತ
9. ತಿಮ್ಮಣ್ಣ ಪೂಂಜ (ಅರ್ಕಾಂಜಿ ಗುತ್ತಿನ ಯಜಮಾನ)
10. ಮುದ್ದಣ್ಣ (ಇವನ ಮಗ)
11. ಮಮ್ಮದೆ - ಮೀನಿನ ವ್ಯಾಪಾರಿ
12. ಮೂಸೆ - ಮಮ್ಮದೆಯ ಮಗ
13. ಕಲೆಕ್ಟರ್ - ಜಿಲ್ಲಾಧಿಕಾರಿ
14. ಪಂಚಾಯತ್ ಅಧ್ಯಕ್ಷರು ಮಲೆಯಾಳಿ ಮುದುಕ
16. ಮಲೆಯಾಳಿ ಮುದುಕನ ಮೊಮ್ಮಗ
17. ತುಳುವರ ಮುದುಕಿ
18. ಮಲೆಯಾಳಿ ಮುದುಕಿ
19. ಮಲೆಯಾಳಿ ಮುದುಕಿಯ ಮೊಮ್ಮಗಳು
20. ತುಳುವರ ಮುದುಕಿ
21. ಉಪಾಧ್ಯಾಯರು (ಪಾಠ ಕಲಿಸುವವರು)
22. ನಾಗರಿಕರು, ಕಲೆಕ್ಟರರ ಪೇದೆ, ವಿಲೇಜ್ ಆಫೀಸರು ಇತ್ಯಾದಿ

"ಯಕ್ಷವಲ್ಲರಿ"ಯ ಹಂದರಕ್ಕೆ ಒಂದು ಕಿರು ಅಡರು

ಡಾ । ಅಂಬೇಮೂಲೆ ಗೋವಿಂದ ಭಟ್ಟರು ಕೃಷಿಕ, ಕಲಾವಿದ, ಕವಿ, ವೈದ್ಯ - ಈ ನಾಲ್ಕು ಉಪಾಧಿಗಳಿಂದ ಪ್ರಖ್ಯಾತರಾದವರು, ಪಾರಂಪರ್ಯದಿಂದ ಬಂದ ಕೃಷಿ ಕ್ಷೇತ್ರದಲ್ಲಿ ನುರಿತವರು. ನಾಡಿನ ಜನಪ್ರಿಯ ಯಕ್ಷಗಾನಕಲೆಯಲ್ಲಿ ಪ್ರಸಂಗಕರ್ತರಾಗಿ, ಅರ್ಥಧಾರಿ ಹಾಗೂ ವೇಷ ಧಾರಿಯಾಗಿ ಪ್ರಸಿದ್ಧರಾದವರು, ಕವಿಯಾಗಿ ರಂಜಿಸಿದವರು, ವೈದ್ಯರಾಗಿ ಸೇವೆ ಸಲ್ಲಿಸಿದವರು. ಇಂದಿನ ಈ ಕಾಲದಲ್ಲಿ ಒಂದು ವೃತ್ತಿಯನ್ನೇ ಸಸೂತ್ರವಾಗಿ ತೂಗಿಸಿಕೊಂಡು ಹೋಗುವುದು ದುರ್ಭರ ಎನ್ನುವಂತಿರುವಾಗ, ಈ ಚತುಷ್ಪಥ ಪಯಣ ಅದು ಹೇಗೆ ನಿಭಾಯಿಸಿಕೊಂಡು ಸಾಗುವರೋ ಎನ್ನುವುದು ನಿಜಕ್ಕೂ ಅಚ್ಚರಿಯ ವಿಷಯವಲ್ಲವೇ ? ಆದರೆ "ಕಿಮಸಾಧ್ಯಂ ಹಿ ಧೀಮತಾಂ" ಎಂಬುದು ಅನುಭವೋಕ್ತಿಯಲ್ಲವೇ ? ನೈಸರ್ಗಿಕ ಪ್ರತಿಭೆಯಿಂದ ಅವರು ಯಕ್ಷಗಾನ ಕಲೆಯಲ್ಲಿ ತೋರಿದ ಅದ್ಭುತ ಸಾಧನೆಯನ್ನು ಯಾರೂ ಮೆಚ್ಚದಿರಲಾರರು. ಪೌರಾಣಿಕ ಕ್ಷೇತ್ರದಿಂದ ಆಧುನಿಕ ವಿಷಯಗಳವರೆಗೆ ಅವರ ಪ್ರಸಂಗಗಳ ಕಥಾವಸ್ತುಗಳ ಹಾಸು - ಬೀಸು ಗಮನ ಸೆಳೆಯುತ್ತಿದೆ. ಭಾಷಾ ಸಂಪತ್ತೂ ಇಂತೆಯೆ. ಕಥೆಗೆ - ವಿಷಯಕ್ಕೆ, ಸಂದರ್ಭಕ್ಕೆ ತಕ್ಕಂತೆ, ಭಾಷೋಪಭಾಷೆಗಳ, ಸಹೋದರ ಭಾಷೆಗಳ ಕೊಳ್‌ಕೊಡುಗೆ ಸಂಬಂಧ ವಿರಾಜಿಸುತ್ತವೆ. ಜನರ ಮನೋರಂಜನೆಗಾಗಿ ಇರುವ ಕಲೆ ಬಹುಶ್ರುತ ವಿಚಾರ ವಿಮರ್ಶಕವೂ ಆಗಿದ್ದಲ್ಲಿ ಅದು ಅತೀವ 'ವ್ಯವಹಾರವಿದೇ' ಎನ್ನುವ ಕಾವ್ಯ ಪ್ರಯೋಜನಾಂಶವನ್ನು ಮೈಗೂಡಿಸಿಕೊಂಡಂತಲ್ಲವೇ ? ಇದೀಗ ಅವರು ಬರೆದ ಪ್ರಸಂಗಗಳ ಎಂದರೆ ೨೦ ವಿವಿಧ ಕ್ಷೇತ್ರಗಳ ವಸ್ತುವಿಷಯ, ಭಾಷೆ, ಶೈಲಿ, ಹೊಸಪ್ರಯೋಗಗಳ - ಪ್ರಸಂಗ ಸಂಪುಟ - "ಯಕ್ಷವಲ್ಲರಿ"ಯ ಬಿಡುಗಡೆಯಾಗುವುದು. ನಾಡಿಗೆ, ನುಡಿಗೆ, ಕಲೆಗೆ,

ಸಂಸ್ಕೃತಿಗೆ, ಒಟ್ಟಾರೆ ಭುವನದ ಭಾಗ್ಯಕ್ಕೆ ಒಂದು ಅಪೂರ್ವ, ಅದ್ಭುತ ಕೊಡುಗೆ ಎನ್ನಲಡ್ಡಿಯಿಲ್ಲ.

ಡಾ। ಗೋವಿಂದ ಭಟ್ಟರು ತಮ್ಮ ಪ್ರಸಂಗಗಳಲ್ಲಿ ಬಳಸಿದ ರಾಗ, ತಾಳ, ಲಯ, ಮಟ್ಟು, ಛಂದಸ್ಸುಗಳ ವೈವಿಧ್ಯ ; ಪ್ರಸಂಗಗಳಲ್ಲಿ ಉಪಯೋಗಿಸಿದ ಹವ್ಯಕ, ಮಲೆಯಾಳಿ, ತುಳು, ಮಾಪಿಳ್ಳೆ ಭಾಷೆ ಮುಂತಾದ ಪಾತ್ರೋಚಿತ , ಸಂದರ್ಭೋಚಿತ ಭಾಷೆಗಳೂ ಪ್ರಸಂಗಗಳಿಗೆ ಒಂದು ರೀತಿಯ ಅಭೂತಪೂರ್ವ ಸೌಂದರ್ಯವ ನ್ನೊದಗಿಸಿವೆ. ಇವು ಶ್ರೋತೃವರ್ಗಕ್ಕೆ ಆಟಕೂಟ ಧ್ವನಿಸುರುಳಿ ರೂಪಗಳಲ್ಲಿ ಒಂದು ಹೊಸ ಆಕರ್ಷಣೆಯನ್ನೂ ಒದಗಿಸಿವೆ. ಬಯಲಾಟ, ಯಕ್ಷಗಾನ ಕೂಟಗಳ ಠೀವಿ ಇಂದು ಬಯಲನ್ನುಳಿದು ಆಲಯದಲ್ಲಿ "ಟಿ. ವಿ."ಯಲ್ಲೇ ತಮ್ಮ ಠೀವಿಯನ್ನು ತೋರಿಸುವಂತಾದ್ದು ವೈಜ್ಞಾನಿಕ ಮುನ್ನಡೆಯ ಪ್ರಭಾವ. ಹಾಗಾಗಿ 'ಬಯಲು ಆಲಯ ದೊಳಗೊ, ಆಲಯವು ಬಯಲೊಳಗೊ' ಎನ್ನುವ ದಾಸರ ಪದ ಮನಃ ಪಟಲದಲ್ಲಿ ಮೂಡಿದರೆ ತಪ್ಪೇನಿಲ್ಲವಲ್ಲ ? ಯಕ್ಷಗಾನ ಮೇಳಗಳಲ್ಲೂ ಶ್ರೀಯುತರು ಬರೆದ ಪ್ರಸಂಗಗಳು ಜನಪ್ರಿಯತೆಯನ್ನು ಗಳಿಸಿವೆ. ಶಾಲಾ ವಾರ್ಷಿಕೋತ್ಸವಗಳಂತಹ ಸಂದರ್ಭ ಗಳಲ್ಲೂ ಇವು ಪ್ರಯೋಗ ಕಂಡಿವೆ ಎಂದಾಗ ಆಬಾಲವೃದ್ಧ, ಪಂಡಿತಪಾಮರ - ಹೀಗೆ ತಾರತಮ್ಯವಿಲ್ಲದೆ ಎಲ್ಲರಿಗೆ ಯಕ್ಷಗಾನ ಕಲೆ ರೋಚಕವಾಗಿದೆ ಎಂಬುದೇ ಅರ್ಥ. (ಅವರು ಬರೆದ ಪ್ರಸಂಗಗಳ ಹೆಸರುಗಳನ್ನೂ, ಅವುಗಳ ವಿಷಯ ವ್ಯಾಪ್ತಿಯನ್ನೂ, ಕಥಾಸಾರಾಂಶಗಳನ್ನೂ 'ಯಕ್ಷವಲ್ಲರಿ' ಯ ಅನುಕ್ರಮಣಿಕೆಯನ್ನು ನೋಡಿ ತಿಳಿದುಕೊಳ್ಳಿ)

ಕಾವ್ಯ ಅಥವಾ ಕಲೆ ಎನ್ನೋಣ, ಕಲೆಯ ಮೂಲಕ ಜನರಿಗೆ ಕರ್ತವ್ಯಾಕರ್ತವ್ಯ ವಿಚಾರಗಳಲ್ಲಿ ಅರಿವನ್ನಿತ್ತು ಕರ್ತವ್ಯದಲ್ಲಿ ಪ್ರವೃತ್ತಿಯನ್ನು ಅಕರ್ತವ್ಯದಿಂದ ನಿವೃತ್ತಿಯನ್ನೂ ಕಾಂತಾ ಸಂಮಿತದಿಂದ ಉಪದೇಶಿಸಬೇಕು. ಯಕ್ಷಗಾನದಂತಹ ಬಹೂಪಯೋಗಿಕಲೆ ಶ್ರವ್ಯ, ದೃಶ್ಯ ಮಾಧ್ಯಮವಾಗಿದ್ದು ; ಸಾಹಿತ್ಯ, ಸಂಗೀತ, ನೃತ್ಯದಂತಹ ಉತ್ತಮ ಕಲೆಗಳ ಮಧುರ ಸಂಗಮವಾಗಿದೆ. ಆಂಗಿಕ, ವಾಚಿಕ, ಆಹಾರ್ಯ ಮುಂತಾದ ವಿಚಾರಗಳೂ ಹಿಮ್ಮೇಳ ಮುಮ್ಮೇಳಗಳ ಸಂಗಮವೂ ಪಂಡಿತ ಪಾಮರ ರಂಜಕವೂ ಆಗಿದೆ ಎಂದಾಗ ಯಕ್ಷಗಾನದ ವೈಶಿಷ್ಟ್ಯಗಳನ್ನು ಪ್ರತ್ಯೇಕವಾಗಿ ಬರೆದೊರೆದು ಹೇಳಬೇಕಾದ ಅಗತ್ಯವೇ ಇಲ್ಲ. ಸ್ವತಃ ಶಾಸ್ತ್ರಜ್ಞ ಕವಿ, ಕಲಾವಿದನೂ ಆದಾಗ ಎಂತಹ ಕಾವ್ಯಸಿದ್ಧಿ ಸಿದ್ಧಿಸುವುದೆಂಬುದಕ್ಕೆ ಡಾ। ಅಂಬೇಮೂಲೆಯವರ ಪ್ರಸಂಗಗಳೇ ಸಾಕ್ಷಿ.

"ಯಕ್ಷವಲ್ಲರಿ"ಯ ಹಂದರದಲ್ಲಿ ಕವಿತಾವಲ್ಲರಿ, ಸಾಹಿತ್ಯ ವಲ್ಲರಿಗಳಂತಹ ಡಾ | ಅಂಬೇಮೂಲೆಯವರ ಇತರ ಸಾಹಿತ್ಯ ರಚನೆಗಳೂ ಟಿಸಿಲೊಡೆದು ಹಬ್ಬಿ ರಾರಾಜಿಸುತ್ತಿವೆ. ಡಾ | ಅಂಬೇಮೂಲೆಯವರ ಸಾಹಿತ್ಯದ ಬೆಳಸು ಮೂಲೆಪಾಲಾಗದೆ, ಒಂದೆಡೆ ಹಬ್ಬಿ ಬೆಳಕು ಕಾಣುತ್ತಿರುವುದು ನಿಜಕ್ಕೂ ಸಂತಸದ ಸಂಗತಿ. ಪಾರ್ತಿಸುಬ್ಬ, ಸಂಕಯ್ಯ ಭಾಗವತರಂತಹ ಶ್ರೇಷ್ಠ ಯಕ್ಷಗಾನ ಪ್ರಸಂಗ ಕರ್ತರ ಜೊತೆ, ಇದೀಗ ಬೆಳಕು ಕಾಣುತ್ತಿರುವ ಡಾ | ಅಂಬೇಮೂಲೆಯವರ "ಯಕ್ಷವಲ್ಲರಿ" ನಿಜಕ್ಕೂ ಯಕ್ಷಗಾನ ಕ್ಷೇತ್ರಕ್ಕೆ ಈ ಭಾಗದ ಒಂದು ಅತ್ಯುತ್ತಮ ಕೊಡುಗೆಯಾಗಿದೆ. ಖ್ಯಾತ ಕರ್ನಾಟಕ ವೃತ್ತಗಳ ಜೊತೆಗೆ ಕಂದ, ಷಟ್ಪದಿ ಮುಂತಾದ ಪ್ರಕಾರಗಳಲ್ಲೂ ಸಾಂಗತ್ಯ ಮುಂತಾದ ಹಾಡು ಗಬ್ಬಗಳ ರಚನೆಗಳಲ್ಲೂ ಗೋವಿಂದ ಭಟ್ಟರು ಸಿದ್ಧ ಹಸ್ತರು. ಅವರು ಬರೆದ ಛಂದೋವೈವಿಧ್ಯಗಳನ್ನು - ಚೌಪದನ ನೀತಿಯ ಮಾತು, ಮದುಮಗಳಿಗೆ ಬುದ್ಧಿ ಹೇಳುವ ಹಾಡು, ವಿಷ್ಣು ದಶಾವತಾರದ ಹಾಡು, ಸೀತಾ ಕಲ್ಯಾಣವು, ಶ್ರೀ ವಿಷ್ಣು ದ್ವಾದಶ ನಾಮದ ಹಾಡು, ಶಿವನಿಗೆ ಆರತಿ ಬೆಳುವ ಹಾಡು, ಶ್ರೀ ರಾಮಚರಿತೆ, ಪಾರ್ವತೀ ಕಲ್ಯಾಣವು, ಕೆಲವು ಬಿಡಿ ಸ್ತುತಿಗಳು, ಮುಂಡೋಡ್ಳು ಶ್ರೀ ಮಹಾವಿಷ್ಣು ದುರ್ಗಾಪರಮೇಶ್ವರೀ ಶಾಸ್ತಾರರ ಸ್ತುತಿ ಪದ್ಯ, ಧ್ರುವ ಚರಿತೆ ಚೌಪದ, ಶ್ರೀ ಗುರುವಂದನೆ ಪದ್ಯವು, ಶ್ರೀ ಗುರುಸ್ತುತಿ, ಶಿವನ ಸ್ತುತಿ ಪದ್ಯಗಳು, ಹನುಮಂತನ ಸ್ತುತಿ, ಧನ್ವಂತರಿ ಸ್ತುತಿ, ಗುರುವಂದನಂ - ಮುಂತಾದ ರಚನೆಗಳಲ್ಲಿ ಕಾಣಬಹುದು. ಇಲ್ಲಿನ ವಿಷಯ ವ್ಯಾಪ್ತಿಯನ್ನೂ ಗಮನಿಸಬೇಕು. ಒಂದು ಪ್ರತ್ಯೇಕ ಸಂಪುಟದಲ್ಲಿ ಹೊರತರುವಷ್ಟು ಪದ್ಯ ಕೃತಿಗಳೂ ಒಂದು ಸಂಪುಟದಲ್ಲಿ ಅಡಕಿಸುವಷ್ಟು ಗದ್ಯ ಲೇಖನಗಳೂ ಬಿಡಿಬರಹಗಳೂ ಈ ಯಕ್ಷ ವಲ್ಲರಿಯಲ್ಲಿ ಸೇರ್ಪಡೆಗೊಂಡುದು ಒಂದು ಅಪೂರ್ವ ಸಂದರ್ಭವೇ ಸರಿ. ಇದೀಗ ಡಾ | ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯದ ಸಮಗ್ರ ಸಂಪುಟ "ಗುಣಗಾತ್ರಗಳಲ್ಲಿ" ಹಿರಿದಾದ ಉದ್ಗ್ರಕೃತಿ ಎನ್ನಲು ಅದೇನೂ ಅಡ್ಡಿ ಆತಂಕಗಳನ್ನು ನಾನು ಕಾಣೆ. ಎಂದೋ ಆಗಬೇಕಿದ್ದ ಕೆಲಸ ಇಂದಾದರೂ ಶ್ರೇಷ್ಠ ರೀತಿಯಲ್ಲೇ ಆಗುತ್ತಿದೆ ಎನ್ನುವುದು ಅದೇನೂ ಕಿರಿಯ ಮಾತಲ್ಲ. ಕವಿ ಕಲಾವಿದರು ತಮ್ಮ ಕಾರ್ಯದ ಮೂಲಕ ಸಮಾಜ ಬಾಂಧವರಿಗೆ ಆನಂದವೀಯುತ್ತಾ ಸಮಾಜದ ಋಣ ಸಂದಾಯ ಮಾಡುವ ಬಗೆ ಒಂದಾದರೆ, ಸಾಮಾಜಿಕರು ಅವರ ಕೆಲಸಗಳನ್ನು ಶಾಶ್ವತವಾಗಿ ಉಳಿಯುವ ಹಾಗೆ ಮಾಡುವುದರ ಮೂಲಕ ಅವರ ಋಣ ಸಂದಾಯ ಮಾಡುವ ಬಗೆ ಇನ್ನೊಂದು. ಅಂತಹ ಸಾರ್ಥಕ ಕೆಲಸವಿದಾಗಿದೆ.

ಈ ಹಿರಿಯ ವ್ಯಕ್ತಿಗೆ - ಎಲ್ಲ ವಿಚಾರದಲ್ಲೂ ಹಿರಿಮೆಯನ್ನು ಸಾಧಿಸಿಯೇ 'ಯಕ್ಷವಲ್ಲರಿ'ಯ ಸಮಗ್ರ ಸೌಂದರ್ಯಾವಲೋಕನವನ್ನು ಮಾಡಿಸುತ್ತಿರುವ ಅವರ ಅಭಿಮಾನಿಗಳಿಗೆ ಅದೆಂತಹ ಅಭಿಮಾನದ ಮಾತುಗಳನ್ನಾಡಿ ನನ್ನ ಕರ್ತವ್ಯವನ್ನು ನೆರವೇರಿಸುವೆನೋ ? ಅಂತೂ ಈಗಲಾದರೂ "ಕಾಲಲಬ್ಧಿ "ಬಂದುದಕ್ಕೆ ಪರಮಾತ್ಮನನ್ನು ಕೊಂಡಾಡಲೇ ಬೇಕು. ಡಾ | ಅಂಬೇಮೂಲೆ ಗೋವಿಂದ ಭಟ್ಟರು ನೂರಾರು ಕಾಲ ನಮ್ಮೊಡನೆ ಇದ್ದು ಅವರ ಚತುಷ್ಪಥ ಗಮನ ಎಲ್ಲರ ಗಮನ ಸೆಳೆಯುವಂತಾಗಲೆಂದೂ ಅವರ ಸಾಹಿತ್ಯ ಕನ್ನಡ ನಾಡಿನ ಭಾಗ್ಯದ ಸಿರಿಬೆಳಕಾಗಿ ಕಂಗೊಳಿಸಲಿ, ನಳನಳಿಸಲಿ ಎಂದು ಆಶಿಸುತ್ತಾ, ಅವರ ಆವರಾಶೀರ್ವಾದಗಳನ್ನು ಬಯಸುತ್ತ ಇದೀಗ ವಿರಮಿಸುತ್ತೇನೆ.

ಪ್ರೊ. ಕೆ. ಸುಬ್ರಹ್ಮಣ್ಯ ಭಟ್ಟ
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳ ಗಂಗೋತ್ರಿ - D. K.

30-3-2006
ಸಾಯಿಜ್ಯೋತಿ
ಆಸ್ಥೆಗೋಳಿ - 574 199 ದ. ಕ.

ಪ್ರಸಂಗ ಪ್ರವೇಶಿಕೆ

1. ರಾಜಹಂಸ ವಿಜಯ : ಸುಭದ್ರಾ ಕಲ್ಯಾಣದ ಅನಂತರ ಶ್ರೀಕೃಷ್ಣನು ಇಂದ್ರಪ್ರಸ್ಥದಲ್ಲಿರುವ ಸಂದರ್ಭದಲ್ಲಿ, ಕೃಷ್ಣಾರ್ಜುನರು ವಿಹಾರಾರ್ಥವಾಗಿ ಯಮುನಾ ನದಿ ತೀರಕ್ಕೆ ಹೋಗುತ್ತಾರೆ. ಆ ಸಮಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಧರ್ಮತತ್ತ್ವದಿಂದ ಕೂಡಿದ "ಶ್ರೀಕೃಷ್ಣಬೋಧಾಮೃತ ಸಾರ" ವೆಂಬ ಭಾಗದಿಂದ ಈ ಪ್ರಸಂಗದ ಕಥಾವಸ್ತುವನ್ನು ಆರಿಸಲಾಗಿದೆ. ಬ್ರಹ್ಮತ್ವ ಪ್ರಾಪ್ತಿಯ ಕುರಿತು ಉಂಟಾದ ಸಂದೇಹದ ಪರಿಹಾರ, ವಿದ್ಯಾರ್ಥಿಯಲ್ಲಿರಬೇಕಾದ ಶ್ರದ್ಧಾಭಕ್ತಿ, ಗುರುಸೇವಾಸಕ್ತಿ, ಧರ್ಮಕ್ಕೇ ಜಯವೆಂಬ ವಿಚಾರಗಳನ್ನು ಈ ಪ್ರಸಂಗ ವಿಶದೀಕರಿಸುತ್ತದೆ.

ooo

2. ತಾರಾ ಶಶಾಂಕ : ಈ ಪ್ರಸಂಗದ ಕಥೆಯನ್ನು ದೇವೀ ಭಾಗವತದಿಂದ ಸಂಗ್ರಹಿಸಲಾಗಿದೆ. ಪ್ರಸಂಗದ ಕಥೆ ಬೃಹಸ್ಪತಿ, ಗುರು, ಚಂದ್ರ, ತಾರೆ, ಇಂದ್ರ, ಬುಧ ಮೊದಲಾದ ಪಾತ್ರಗಳ ಸುತ್ತ ಹೆಣೆದುಕೊಂಡಿದೆ, ಅವಿವೇಕ, ಅಹಂಕಾರ ಅನ್ಯಾಯಗಳನ್ನು ಮಾಡುವವರಿಗೆ ಕೇಡು ತಪ್ಪಿದ್ದಲ್ಲವೆಂಬ ನೀತಿಯ ಅಂಶ ಇದರಲ್ಲಿದೆ.

ooo

3. ಖಟ್ವಾಂಗ ಚರಿತೆ : ಸೂರ್ಯವಂಶದ ದೊರೆಯ ಈ ಕಥೆಯನ್ನು ಪುರಾಣನಾಮ ಚೂಡಾಮಣಿಯಿಂದ ಆರಿಸಲಾಗಿದೆ. ನಂದಿನಿ ಪೂಜೆಯಿಂದ ಪುತ್ರ ಸಂತಾನಾದಿ ಭಾಗ್ಯಗಳನ್ನು ಪಡೆದು ದುಷ್ಟರನ್ನು ನಿಗ್ರಹಿಸಿದ ವಿಷಯ ಈ ಪ್ರಸಂಗದಲ್ಲಿದೆ. ಗೋಪುಜೆಯ ಮಹತ್ವ ಮತ್ತು ಗೋ ನಿಂದೆಯ ಪರಿಣಾಮಗಳನ್ನು ಈ ಪ್ರಸಂಗದ ಕಥೆಯು ತಿಳಿಸುತ್ತದೆ.

ooo

4. ರಾಜಾ ಕರಂಧಮ : ಮಾರ್ಕಾಂಡೇಯ ಪುರಾಣ ಇದಕ್ಕೆ ಆಧಾರ. ದುಷ್ಟರು ಎಷ್ಟೇ ಬಲಿಷ್ಠರಾದರೂ ಅವರಿಗೆ ದೈವಾನುಗ್ರಹವಿಲ್ಲ. ನುಡಿಯಂತೆ ನಡೆಯುವುದು

ಬದುಕಿನ ಪಥವಾಗಬೇಕು ಎಂಬುದನ್ನು ಈ ಪ್ರಸಂಗ ತಿಳಿಸುತ್ತದೆ.

ooo

5. ಪೃಥುರಾಜ ದಿಗ್ವಿಜಯ : ವಿಷ್ಣು ಪುರಾಣ ಮತ್ತು ಭಾಗವತ ಈ ಪ್ರಸಂಗಕ್ಕೆ ಆಧಾರ. ವಿಧಿ ಸಂಕಲ್ಪವನ್ನು ಮೀರಿ ಏನೂ ನಡೆಯಲಾರದು. ಧರ್ಮಿಷ್ಠನಾದ ಪೃಥುವು 99 ಅಶ್ವಮೇಧ ಯಾಗಗಳನ್ನು ಮಾಡಿ 100 ನೇ ಯಾಗವನ್ನು ಆರಂಭಿಸಿದರೂ ಇಂದ್ರ ಪದವಿಯನ್ನು ಪಡೆಯದೇ ಹೋಗುತ್ತಾನೆ. ಬ್ರಹ್ಮದೇವನಿಂದ 'ಏಕೋನ ಶತಕ್ರತು' ಎಂಬ ಅಭಿದಾನವನ್ನು ಪಡೆಯುವುದರೊಂದಿಗೆ ಕಥೆ ಮುಕ್ತಾಯಗೊಳ್ಳುತ್ತದೆ. ದುಷ್ಟಶಕ್ತಿ ವಿಜೃಂಭಿಸಿದರೆ ಪ್ರಜೆಗಳು, ಸತ್ಕರ್ಮಗಳು ನಾಶಹೊಂದಿ ಭೂಮಿ ಬರಡಾಗುತ್ತದೆಂಬು ಈ ಪ್ರಸಂಗದಿಂದ ವ್ಯಕ್ತಗೊಳ್ಳುತ್ತದೆ.

ooo

6. ಕಾಲನೇಮಿ ಕಾಳಗ : ಪುರಾಣ ನಾಮ ಚೂಡಾಮಣಿಯಿಂದ ಆಯ್ದ ವಿಚಾರಗಳ ಆಧಾರದಲ್ಲಿ ಈ ಪ್ರಸಂಗವು ರೂಪುಗೊಂಡಿವೆ. ದುರುಳರು ವರಬಲದಿಂದ ದೇವಲೋಕವನ್ನು ಗೆದ್ದು ಸುಮನಸರಿಗೆ ಸದಾ ಹಿಂಸೆ ನೀಡುತ್ತಿರುವವರನ್ನು ಮಹಾವಿಷ್ಣು ನಿಗ್ರಹಿಸಿ ಕ್ಷೇಮವನ್ನುಂಟು ಮಾಡುತ್ತಾನೆ. ಅತಿಕಾಮುಕ ಭಾವ ಸರ್ವನಾಶಕ್ಕೆ ಕಾರಣ ಎಂಬುದನ್ನು ತಿಳಿಸುತ್ತದೆ.

ooo

7. ತಪತೀ ಸಂವರಣ : ಮಹಾಭಾರತದ ಕಥೆ ಇದಕ್ಕೆ ಆಧಾರ. ಸೂರ್ಯಪುತ್ರಿ ತಪತಿಯು ಅವಳ ಇಷ್ಟದಂತೆ ಮಾನವನಾದ ಸಂವರಣನನ್ನು ಮದುವೆಯಾಗುತ್ತೇನೆಂದು ಮಾತುಕೊಟ್ಟಿದ್ದು ಈ ಕಥೆಗೆಕಾರಣವಾಗುತ್ತದೆ. ಸ್ತ್ರೀಗೆ ವಿಶೇಷವಾದ ಸ್ವಾತಂತ್ರ್ಯವು ಅನರ್ಥಕ್ಕೆ ಕಾರಣವಾಗುತ್ತದೆ ಎಂಬುದಕ್ಕೆ ಪೂರಕವಾಗಿ ಕಥೆಯು ಬೆಳೆದು ವ್ರತಾದಿಗಳನ್ನು ನಿಷ್ಠೆಯಿಂದ ಪಾಲಿಸಿದರೆ ವಾಂಛಿತ ಫಲಗಳು ದೊರಕುತ್ತವೆ ಎಂಬುದನ್ನು ಈ ಕಥಾ ಪ್ರಸಂಗವು ತಿಳಿಸುತ್ತದೆ.

ooo

8. ದ್ರೌಪದಿ ಪ್ರತಾಪ : ಕಾಲ್ಪನಿಕ ಕಥೆ. ಕನ್ನಡ ಯಕ್ಷಗಾನ ಪ್ರಸಂಗ ಆಧಾರ. ಹವ್ಯಕ ಭಾಷೆಯಲ್ಲಿದೆ. ದ್ರೌಪತಿಯ ಪರಾಕ್ರಮದ ಪ್ರದರ್ಶನಕ್ಕೆ ಈ ಕಥಾಭಾಗ ಮೀಸಲು. (ಪ್ರಸ್ತುತ ಪ್ರತಿ ಇಲ್ಲ)

ooo

9. ಕಾರ್ತವೀರ್ಯಾರ್ಜುನ ಕಾಳಗ : ಪುರಾಣಾಂತರ್ಗತವಾದ ಈ ಕಥಾ ಪ್ರಸಂಗ ಹವ್ಯಕ ಭಾಷೆಯಲ್ಲಿದೆ. ಕಾರ್ತವೀರ್ಯನ ಪರಾಕ್ರಮ ಮತ್ತು ಪರಾಕ್ರಮದ ಅಮಲಿಗೆ ಪಾಠ ಇವರಲ್ಲಿ ಅಡಕವಾದ ವಿಚಾರ.

ooo

10. ಶ್ರೀಕೃಷ್ಣ ತುಲಾಭಾರ : ಹರಿದಾಸರ ಕಥಾ ಸಂಗ್ರಹದಿಂದ ಈ ಪ್ರಸಂಗಕ್ಕೆ ಕಥೆಯನ್ನು ಪಡೆಯಲಾಗಿದೆ. ಮಹಾಪತಿವ್ರತೆಯೆಂದು ಬೀಗುತ್ತಿದ್ದ ಸತ್ಯಭಾಮೆಯ ಸೊಕ್ಕನ್ನು ಮುರಿಯುವ, ತನ್ಮೂಲಕ ಅವಳನ್ನು ತಿದ್ದುವ ವಿಚಾರ ಈ ಪ್ರಸಂಗದ ಕಥಾವಸ್ತು.

ooo

11. ಸುಬ್ರಹ್ಮಣ್ಯಕ್ಷೇತ್ರ ಮಹಾತ್ಮೆ : ಸುಬ್ರಹ್ಮಣ್ಯ ಕ್ಷೇತ್ರ ಮಹಾತ್ಮೆ ಗ್ರಂಥವೇ ಆಧಾರ. ಗರುಡ ಮತ್ತು ಸರ್ಪಗಳ ನಡುವಿನ ದ್ವೇಷ, ವಾಸುಕಿಯ ತಪಸ್ಸು, ನನ್ನ ಕುವರನಿಂದ ನಿನಗೆ ರಕ್ಷಣೆ ಎಂಬ ಅನುಗ್ರಹ ಶಿವನಿಂದ. ಸುಬ್ರಹ್ಮಣ್ಯದಲ್ಲಿ ಕುಮಾರ ಮತ್ತು ವಾಸುಕಿಯ ನೆಲೆ. ರೋಗ ನಿವಾರಣೆ ವಿಚಾರಗಳಿಗೆ ಈ ಪ್ರಸಂಗದಲ್ಲಿ ಪ್ರಧಾನ್ಯ.

ooo

12. ಪುತ್ತಿಗೆ ಕ್ಷೇತ್ರ ಮಹಾತ್ಮೆ : ಹಿರಿಯರು ನೀಡಿದ ಕಥಾಮಾಹಿತಿಯಂತೆ ಐತಿಹಾಸಿಕ ವಸ್ತುವಿನಿಂದ ಕೂಡಿ ಈ ಪ್ರಸಂಗ ರಚನೆಯಾಗಿದೆ. ಪುತ್ತಿಗೆ ಕ್ಷೇತ್ರ ನಿರ್ಮಾಣ, ಜಾತ್ರೆಗೆ ಬೇಕಾದ ರಥದ ವಿಚಾರ ಭೂತಗಳ ಹೊಯ್ಯಾಟ, ಶಿವ ಸಾನ್ನಿಧ್ಯ, ಮಹಾಮಂತ್ರಿಯ ಚಾಣ್ಮೆ ಇತ್ಯಾದಿ ವಿಚಾರಗಳನ್ನು ತಿಳಿಸುವ ಈ ಪ್ರಸಂಗ ಮಾನವನು ಮನಸ್ಸು ಮಾಡಿದರೆ ಎಂತಹ ಕಾರ್ಯವನ್ನಾದರೂ ಮಾಡಿಯಾನು ಎಂಬುದನ್ನು ತಿಳಿಸುತ್ತದೆ.

ooo

13. ಸುಭದ್ರಾ ಕಲ್ಯಾಣ : ಅರ್ಜುನನು ತೀರ್ಥಯಾತ್ರೆಯ ಸಂದರ್ಭದಲ್ಲಿ ಸುಭದ್ರೆಯನ್ನು ವಿವಾಹವಾಗುವ ವಿಚಾರ ಈ ಪ್ರಸಂಗದ ಕಥಾ ವಸ್ತು. ಹವ್ಯಕರ ಮನೆ ಮಾತಾದ ಹವ್ಯಕ ಕನ್ನಡದಲ್ಲಿ ಆ ಪ್ರಸಂಗ ರಚನೆಯಾಗಿರುವುದು ಇದರ ವಿಶೇಷತೆ.

ooo

14. ವೀರ ದಶರಥ : ಮಲೆಯಾಳ ಭಾಷೆಯಲ್ಲಿರುವ ಕಂಬರಾಮಾಯಣದಿಂದ ಈ ಪ್ರಸಂಗಕ್ಕೆ ಕಥೆಯನ್ನು ಪಡೆದುಕೊಳ್ಳಲಾಗಿದೆ. ದುಷ್ಟನಿಗ್ರಹಕ್ಕಾಗಿ ದೇವತೆಗಳ ಪರಹೋರಾಡುವುದು, ಆಗ ಕೈಕೆ ಸಹಕರಿಸುವುದು, ವರಪಡೆಯುವುದು ಈ ಪ್ರಸಂಗದ ವಸ್ತು. ಎಂತಹ ಕಷ್ಟ ಬಂದರೂ ಎದೆಗುಂದದೆ ಮುಂದುವರಿದರೆ ಜಯ ಪ್ರಾಪ್ತಿ ಖಂಡಿತ

ಎಂಬುದನ್ನೂ ಸಂಸಾರ ರಥದಲ್ಲಿ ಸ್ತ್ರೀಯರ ಪಾಲುಗೊಳ್ಳುವಿಕೆಯನ್ನೂ ಆದರಿಸಬೇಕೆಂಬುದನ್ನು ತಿಳಿಸುತ್ತದೆ.

ooo

15. ಒಡಿಯೂರು ಕ್ಷೇತ್ರ ಮಹಿಮೆ :

ತ್ರಿಮೂರ್ತಿಗಳು ಮಹಾಸತಿ ಅನಸೂಯ ದೇವಿಯಲ್ಲಿಗೆ ಬಂದು ಹಸುಗೂಸುಗಳಾಗಿ ಮೊಲೆಯುಂಡದ್ದು, ಮುಂದೆ ತ್ರಿಮೂರ್ತಿಶಕ್ತಿಯ ಪ್ರತೀಕವಾದ ದೇವ ದತ್ತಾತ್ರೇಯನ ವಿಷಯ, ದೇವರಪವಾಡ, ಗಾಣಗಾಪುರದ ವಿಚಾರ, ಶ್ರೀ ಶ್ರೀಗುರುದೇವಾನಂದಯತಿವರ್ಯರಿಂದಾಗಿ ಶ್ರೀ ಒಡಿಯೂರು ಕ್ಷೇತ್ರ ದಕ್ಷಿಣದ ಗಾಣಗಾಪುರವೆನಿಸಿ, ಅನ್ನದಾನ, ಅಭಯದಾನ, ಆರೋಗ್ಯದಾನಾದಿಗಳಿಂದ ಪ್ರಸಿದ್ಧಿ ಪಡೆದ ವಿಚಾರವಿರುವ ಈ ಪ್ರಸಂಗಕ್ಕೆ ಶ್ರೀಗುರುಚರಿತೆ ಮತ್ತು ಒಡಿಯೂರು ಕ್ಷೇತ್ರ ಪುರಾಣ ಆಧಾರ.

ooo

16. ಜಯ ವಿಜಯ : ಭೂತಾಳ ಪಾಂಡ್ಯನ ಕಥೆ ಆಧಾರ. ಅಳಿಯ ಕಟ್ಟು ಅನುಷ್ಠಾನಕ್ಕೆ ಬಂದ ಬಗೆಯ ವಿವರಣೆ ಈ ಕಥೆಯಲ್ಲಿದೆ. ಸತ್ಯಧರ್ಮದಿಂದ ಬಾಳುವವರಿಗೆ ದೈವಾನುಗ್ರಹವಿದೆ ಎಂಬುದನ್ನು ಈ ಕಥಾಭಾಗ ನಿರೂಪಿಸುತ್ತದೆ.

ooo

17. ವಿಷ್ಣುಮೂರ್ತಿ ದೈವದ ಮಹಾತ್ಮೆ : ಕವಿಗೆ ನೆಟ್ಟಣಿಗೆ ಮೇಳದ ಅಧಿಕಾರಿ ಬಳಗದವರು ಒದಗಿಸಿದ ಕಥೆಯ ಆಧಾರದಲ್ಲಿ ಈ ಐತಿಹಾಸಿಕ ಪ್ರಸಂಗ ರಚನೆಯಾಗಿದೆ. ದೈವಕ್ಕೆ ಹರಕ್ಕೆ ಹೊತ್ತು ಇಷ್ಟಾರ್ಥವನ್ನು ಈಡೇರಿಸಿಕೊಂಡದ್ದು, ಹರಕೆಯನ್ನು ಒಪ್ಪಿಸಲು ಮರೆತದ್ದರಿಂದ ಕಷ್ಟ ಅನುಭವಿಸಿ ಮುಂದೆ ದೈವ ಸೇವೆ ಮಾಡಿ ಒಳಿತಾದ ವಿಷಯ ಈ ಪ್ರಸಂಗದಲ್ಲಿದೆ. 'ನಂಬಿದರೆ ಇಂಬು' ಎಂಬ ಬಲ್ಲವರ ಮಾತಿಗೆ ಕಥೆ ಒತ್ತು ನೀಡುತ್ತದೆ.

ooo

18. ಪರಕತೆ ಪೂಜೆ : ಬರಹಗಾರರ ಸ್ನೇಹಿತರು ನೀಡಿದ ಮಾಹಿತಿಗಳು ಈ ಪ್ರಸಂಗ ರಚನೆಗೆ ಕಾರಣ. ಕಷ್ಟಕಾಲದಲ್ಲಿ ಹೇಳಿಕೊಂಡ ಹರಕೆಯನ್ನು ಮರೆತು ಅನುಭವಿಸಿದ ಕಷ್ಟಗಳು, ಹರಕೆ ಸಲ್ಲಿಸಿದ ಮೇಲೆ ಒದಗಿದ ಇಷ್ಟ ವಿಚಾರ ಈ ಪ್ರಸಂಗದಲ್ಲಿದೆ. ಕಷ್ಟ ಕಾಲದಲ್ಲೂ ಧರ್ಮಾತ್ಮರಾಗಿ ಬಾಳಿದರೆ ದೈವಾನುಗ್ರಹ ವಿರುತ್ತದೆ ಎಂಬ ಲೋಕನೀತಿ ಈ ಕಥೆಯಲ್ಲಿದೆ.

ooo

19. ಒಕ್ಕಲು ಮಸೂದೆ : ಭೂ ಮಸೂದೆ, ಹೊಸ ಕೃಷಿ ವಿಚಾರ ಜಾರಿಗೆ ಬಂದ ಕಾಲದಲ್ಲಿ ಧನಿ ಒಕ್ಕಲುಗಳ, ಹಳಬರ ಹೊಸಬರ ನಡುವೆ ಹುಟ್ಟಿಕೊಂಡ ವಾದ ವಿವಾದಗಳು ಈ ಪ್ರಸಂಗ ರಚನೆಗೆ ಹಿನ್ನಲೆ. ಶ್ರೀಮಂತರ ದಬ್ಬಾಳಿಕೆ, ಹೊಸಕೃಷಿಯ ಬಗ್ಗೆ ಹಳಬರ ನಿರಾಸಕ್ತಿ, ಕಾನೂನಿನ ಪ್ರಾಧಾನ್ಯ, ಕಾಲಾನುಕ್ರಮದಲ್ಲಿ ಹೊಸಕೃಷಿಗೆ ಒಲವು ಪಾತ್ರಾನುಸಾರೀಭಾಷಾ ಪ್ರಯೋಗ ಇಲ್ಲಿನ ವಿಶೇಷ.

ooo

20. ಅಕ್ಷರ ವಿಜಯ : ಸಾಮಾಜಿಕ ಕಥಾವಸ್ತುವಿರುವ ಈ ಪ್ರಸಂಗವು ಸಾಕ್ಷರತಾ ಆಂದೋಲನದ ಪ್ರಚಾರಕ್ಕಾಗಿ ರಚನೆಗೊಂಡಿದೆ. ವಿದ್ಯಾರ್ಜನೆಯ ಮಹತ್ವವನ್ನು ತಿಳಿಸುವುದೇ ಈ ಪ್ರಸಂಗ ಉದ್ದೇಶ ಪಾತ್ರಾನುಸಾರೀ ಭಾಷಾ ಪ್ರಯೋಗ ಇದರ ವಿಶೇಷತೆ.

ooo

21. ಪೋರ್ಜರಿ ಪ್ರಸಂಗ : ಸಾಮಾಜಿಕ ಕಥಾವಸ್ತುವಿನಿಂದ ಕೂಡಿದ ಪ್ರಸಂಗವಿದು.

ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯ ಪ್ರಕಾಶನ ಸಮಿತಿ,

ಮುಳ್ಳೇರಿಯ

ಗೌರವಾಧ್ಯಕ್ಷರು	: ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳವರು
ಅಧ್ಯಕ್ಷರು	: ಶ್ರೀ ಖಂಡಿಗೆ ಶ್ಯಾಮ ಭಟ್
ಕಾರ್ಯಾಧ್ಯಕ್ಷರು	: ಶ್ರೀ ಬೆಳ್ಳಿಗೆ ನಾರಾಯಣ ಮಣಿಯಾಣಿ
ಉಪಾಧ್ಯಕ್ಷರು	: ಡಾ। ಲಲಿತಾ ಎಸ್. ಎನ್. ಭಟ್ ಶ್ರೀ ಐ. ವಿ. ಭಟ್ ಶ್ರೀ ಎಂ. ನಾರಾಯಣ ಭಟ್ ಶ್ರೀ ಎಸ್. ಎಸ್. ಭಟ್ ಶ್ರೀ ಪಾತಾಳ ವೆಂಕಟ್ರಮಣ ಭಟ್ ವೇ। ಮೂ। ಶ್ರೀ ಕಿಳಿಂಗಾರು ಶಂಕರ ನಾರಾಯಣ ಭಟ್ ಬಿ. ರಾಧಾಕೃಷ್ಣ ಭಟ್ ಪಣಿಯೆ ಶ್ರೀ ಅಡೂರು ಶ್ರೀಧರ ರಾವ್ ಶ್ರೀ ಕೆ. ರಾಮ ಭಟ್ ಕಯಂಪಾಡಿ ಶ್ರೀ ಉಂಡೆಮನೆ ಶಂಕರ ನಾರಾಯಣ ಭಟ್ ಶ್ರೀ ಕೊಲ್ಲಂಪಾರೆ ನಾರಾಯಣ ಭಟ್ ಡಾ। ವಿ. ಕೇಶವ ಭಟ್ ಶ್ರೀ ವಿ. ಆರ್. ಶೆಣೈ ಶ್ರೀ ತೆಕ್ಕೇಕರೆ ನಾರಾಯಣ, ಮುಂಬೈ
ಕಾರ್ಯದರ್ಶಿಗಳು	: ಶ್ರೀ ಟಿ. ಶಂಕರ ನಾರಾಯಣ ಭಟ್ ಮತ್ತು ಶ್ರೀ ಗುಣಶೇಖರ
ಜತೆ ಕಾರ್ಯದರ್ಶಿಗಳು	: ಶ್ರೀ ಟಿ. ಎಸ್. ಎನ್. ಭಟ್ (ಸುಬ್ರಹ್ಮಣ್ಯ) ಶ್ರೀ ಕೆ. ಈಶ್ವರ ಭಟ್

ಖಜಾಂಚಿ : ಶ್ರೀ ಕೆ. ನಟರಾಜ ನಾಯಕ್

ಸದಸ್ಯರು : ಶ್ರೀ ತೆಕ್ಕೇಕರೆ ಸುಬ್ರಹ್ಮಣ್ಯ ಭಟ್ S/o. ಕೃಷ್ಣ ಭಟ್
ಶ್ರೀಮತಿ ಜಿ. ಶಾರದಾ ಕೃಷ್ಣ ಭಟ್ ಕೊರೆಕ್ಕಾನ
ಶ್ರೀ ದೇವಾನಂದ ಶೆಟ್ಟಿ
ಶ್ರೀ ಎಂ. ರಾಮಯ್ಯ ಮೂಳೂರು
ಶ್ರೀ ಬಿಲ್ಲಂಪದವು ನಾರಾಯಣ ಭಟ್
ಶ್ರೀ ರಮೇಶ್ ಭಟ್ ಪುತ್ತೂರು
ಶ್ರೀ ರಾಘವ ಬಲ್ಲಾಳ್
ಶ್ರೀ ಟಿ. ಸುಬ್ರಹ್ಮಣ್ಯ ಭಟ್, S/o ಪರಮೇಶ್ವರ ಭಟ್
ಶ್ರೀ ಕೆ. ಶಂಭಯ್ಯ ಶಂಕೇಶಕಜೆ
ಶ್ರೀ ಬಾಲಸುಬ್ರಹ್ಮಣ್ಯ ಆರ್ತಿಯಡ್ಕ
ಶ್ರೀ ಕಜೆ ಕೃಷ್ಣ ಭಟ್
ಬಾಳೆ ಕುಮೇರಿ ಶ್ರೀ ಗೋಪಾಲಕೃಷ್ಣ ಭಟ್
ಶ್ರೀ ಟಿ. ಕೆ. ನಾರಾಯಣ ಭಟ್ ಪಂಜಿತ್ತಡ್ಕ
ಶ್ರೀ ಯು. ವಿ. ಮಹಾಲಿಂಗ ಭಟ್
ಶ್ರೀ ಎನ್. ಸುಬ್ರಾಯ ಭಟ್, ಕಾನ ಮೂಡಕೆರೆ
ಡಾ. ಕೆ. ಸುಬ್ರಹ್ಮಣ್ಯ ಭಟ್
ಡಾ. ಕೆ. ಕಮಲಾಕ್ಷ
ಶ್ರೀ ಬಿ. ಎನ್. ಮಹಾಲಿಂಗ ಭಟ್, ಬಿಲ್ಲಂಪದವು
ಶ್ರೀ ಯತೀಶ್ ಕುಮಾರ್ ರೈ, ಮುಳ್ಳೇರಿಯ
ಶ್ರೀ ನರಸಿಂಹ ಭಟ್, ಪಾತನಡ್ಕ
ಶ್ರೀ ಅಂಬೇಮೂಲೆ ಶಿವರಾಮ ಭಟ್

ಕೃತಿ ಸಂಪಾದನಾ ಸಮಿತಿ : ಶ್ರೀ ಮುಳಿಯ ಶಂಕರ ಭಟ್
ಶ್ರೀ ನಾ. ಕಾರಂತ, ಪೆರಾಜೆ
ಶ್ರೀ ಟಿ. ಸುಬ್ರಹ್ಮಣ್ಯ ಭಟ್
ಶ್ರೀ ಗಣಪತಿ ಪದ್ಯಾಣ

ಯಾರಿವಳಮಮ
ಶೃಂಗಾರೀ
। ಸತಿ ।
ತಾರಕೇಂದುವಿ
ನಂತಿಹಳು ನಾರೀ ॥
ಸಾರಸವದನೆ
ಕೋಮಲಗಾತ್ರೆ
। ಮತ್ತ ।
ವಾರಣ ಗಮನೆ
ಹರಿಣನೇತ್ರೆ ॥



ಡಾ. ಅಂಬೇಮೂಲೆ ಗೋವಿಂದ ಭಟ್ಟ
ಸಾಹಿತ್ಯ ಪ್ರಕಾಶನ ಸಮಿತಿ,
ಮುಳ್ಳೇರಿಯ

